  $-8\neq9$

$\therefore h=0$ ಬೆಲೆಯು $h-8=5$ ನ್ನು ತೃಪ್ತಿಪಡಿಸುವುದಿಲ್ಲ.

| | | |
|---|---|---|
| m) | $p+3=1$ | $p=3$ |

- $3+3\neq1$
  $6\neq1$

$\therefore p=3$ ಬೆಲೆಯು $p+3=1$ ನ್ನು ತೃಪ್ತಿಪಡಿಸುವುದಿಲ್ಲ.

| n) | $p + 3 = 1$ | $p = 1$ |
|---|---|---|

- $1 + 3 \neq 1$
  $4 \neq 1$

$\therefore p = 1$ ಬೆಲೆಯು $p + 3 = 1$ ನ್ನು ತೃಪ್ತಿಪಡಿಸುವುದಿಲ್ಲ.

| o) | $p + 3 = 1$ | $p = 0$ |
|---|---|---|

- $0 + 3 \neq 1$
  $3 \neq 1$

$\therefore p = 0$ ಬೆಲೆಯು $p + 3 = 1$ ನ್ನು ತೃಪ್ತಿಪಡಿಸುವುದಿಲ್ಲ.

| p) | $p + 3 = 1$ | $p = -1$ |
|---|---|---|

- $-1 + 3 \neq 1$
  $2 \neq 1$

$\therefore p = -1$ ಬೆಲೆಯು $p + 3 = 1$ ನ್ನು ತೃಪ್ತಿಪಡಿಸುವುದಿಲ್ಲ.

| q) | $p + 3 = 1$ | $p = -2$ |
|---|---|---|

- $-2 + 3 = 1$
  $1 = 1$

$\therefore p = -2$ ಬೆಲೆಯು $p + 3 = 1$ ನ್ನು ತೃಪ್ತಿಪಡಿಸುತ್ತದೆ.

3. ಇಲ್ಲಿ ಕೊಟ್ಟಿರುವ ಪ್ರತಿಯೊಂದು ಸಮೀಕರಣಕ್ಕೆ ಮುಂದೆ ಆವರಣದಲ್ಲಿ ಕೊಟ್ಟಿರುವ ಬೆಲೆಗಳ ಪೈಕಿ ಪರಿಹಾರವನ್ನು ಗುರುತಿಸಿ. ಉಳಿದ ಬೆಲೆಗಳು ಸಮೀಕರಣವನ್ನು ತೃಪ್ತಿಪಡಿಸುವುದಿಲ್ಲ ಎಂಬುದನ್ನು ತೋರಿಸಿ.

a) 5m = 60 (10, 5, 12, 15)

- $5 \times 10 \neq 60$
  $50 \neq 60$

∴ 10, 5m = 60 ನ್ನು ತೃಪ್ತಿಪಡಿಸುವುದಿಲ್ಲ.

- $5 \times 5 \neq 60$
  $25 \neq 60$

∴ 5, 5m = 60 ನ್ನು ತೃಪ್ತಿಪಡಿಸುವುದಿಲ್ಲ.

- $5 \times 12 = 60$
  $60 = 60$

∴ 12, 5m = 60 ನ್ನು ತೃಪ್ತಿಪಡಿಸುತ್ತದೆ.

- $5 \times 15 \neq 60$
  $75 \neq 60$

∴ 15, 5m = 60 ನ್ನು ತೃಪ್ತಿಪಡಿಸುವುದಿಲ್ಲ.

ಆದ್ದರಿಂದ 5m = 60 ನ್ನು ತೃಪ್ತಿಪಡಿಸುವ ಬೆಲೆ = 12

b) n + 12 = 20 (12, 8, 20, 0)

- $12 + 12 \neq 20$
  $24 \neq 20$

∴ 12, n + 12 = 20 ನ್ನು ತೃಪ್ತಿಪಡಿಸುವುದಿಲ್ಲ.

- $8 + 12 = 20$
  $20 = 20$

∴ 8, n + 12 = 20 ನ್ನು ತೃಪ್ತಿಪಡಿಸುತ್ತದೆ.

- $20 + 12 \neq 20$
  $32 \neq 20$

∴ 20, n + 12 = 20 ನ್ನು ತೃಪ್ತಿಪಡಿಸುವುದಿಲ್ಲ.

- $0 + 12 \neq 20$
  $12 \neq 20$

∴ 0, n + 12 = 20 ನ್ನು ತೃಪ್ತಿಪಡಿಸುವುದಿಲ್ಲ.

ಆದ್ದರಿಂದ n + 12 = 20 ನ್ನು ತೃಪ್ತಿಪಡಿಸುವ ಬೆಲೆ = 8

c) p – 5 = 5 (0, 10, 5, -5)

- $0 - 5 \neq 5$
  $-5 \neq 5$

∴ 0, p – 5 = 5 ನ್ನು ತೃಪ್ತಿಪಡಿಸುವುದಿಲ್ಲ.

- $10 - 5 = 5$
  $5 = 5$

∴ 10, p – 5 = 5 ನ್ನು ತೃಪ್ತಿಪಡಿಸುತ್ತದೆ.

- $5 - 5 \neq 5$
  $0 \neq 5$

∴ 5, p – 5 = 5 ನ್ನು ತೃಪ್ತಿಪಡಿಸುವುದಿಲ್ಲ.

- $-5 - 5 \neq 5$
  $-10 \neq 5$

∴ -5, p – 5 = 5 ನ್ನು ತೃಪ್ತಿಪಡಿಸುವುದಿಲ್ಲ.

ಆದ್ದರಿಂದ p – 5 = 5 ನ್ನು ತೃಪ್ತಿಪಡಿಸುವ ಬೆಲೆ = 10

d) $\frac{q}{2} = 7$ (7, 2, 10, 14)

- $\frac{7}{2} \neq 7$
  $\frac{7}{2} \neq 7$

∴ 7, $\frac{q}{2} = 7$ ನ್ನು ತೃಪ್ತಿಪಡಿಸುವುದಿಲ್ಲ.

- $\frac{2}{2} \neq 7$
  $1 \neq 7$

∴ 2, $\frac{q}{2} = 7$ ನ್ನು ತೃಪ್ತಿಪಡಿಸುವುದಿಲ್ಲ

- $\frac{10}{2} \neq 7$
  $5 \neq 7$

∴ 10, $\frac{q}{2} = 7$ ನ್ನು ತೃಪ್ತಿಪಡಿಸುವುದಿಲ್ಲ

- $\frac{14}{2} = 7$
  $7 = 7$

∴ 14, $\frac{q}{2} = 7$ ನ್ನು ತೃಪ್ತಿಪಡಿಸುತ್ತದೆ.

ಆದ್ದರಿಂದ $\frac{q}{2} = 7$ ನ್ನು ತೃಪ್ತಿಪಡಿಸುವ ಬೆಲೆ = 14

e) r – 4 = 0 (4, -4, 8, 0)

- $4 - 4 = 0$
  $0 = 0$

∴ 4, r – 4 = 0 ನ್ನು ತೃಪ್ತಿಪಡಿಸುತ್ತದೆ.

- $-4 - 4 \neq 0$
  $-8 \neq 0$

∴ -4, r – 4 = 0 ನ್ನು ತೃಪ್ತಿಪಡಿಸುವುದಿಲ್ಲ.

- $8 - 4 \neq 0$
  $4 \neq 0$

∴ 8, r – 4 = 0 ನ್ನು ತೃಪ್ತಿಪಡಿಸುವುದಿಲ್ಲ.

- $0 - 4 \neq 0$
  $-4 \neq 0$

∴ -0, r – 4 = 0 ನ್ನು ತೃಪ್ತಿಪಡಿಸುವುದಿಲ್ಲ.

ಆದ್ದರಿಂದ r – 4 = 0 ನ್ನು ತೃಪ್ತಿಪಡಿಸುವ ಬೆಲೆ = 0

f) x + 4 = 2 (-2, 0, 2, 4)

- $-2 + 4 = 2$
  $2 = 2$

∴ -2, x + 4 = 2ನ್ನು ತೃಪ್ತಿಪಡಿಸುತ್ತದೆ.

- $0 + 4 \neq 2$
  $4 \neq 2$

∴ 0, x + 4 = 2 ನ್ನು ತೃಪ್ತಿಪಡಿಸುವುದಿಲ್ಲ.

- $2 + 4 \neq 2$
  $6 \neq 2$

∴ 2, x + 4 = 2 ನ್ನು ತೃಪ್ತಿಪಡಿಸುವುದಿಲ್ಲ.

- $4 + 4 \neq 2$
  $8 \neq 2$

∴ 4, x + 4 = 2 ನ್ನು ತೃಪ್ತಿಪಡಿಸುವುದಿಲ್ಲ.

ಆದ್ದರಿಂದ x + 4 = 2 ನ್ನು ತೃಪ್ತಿಪಡಿಸುವ ಬೆಲೆ = -2

4. (a) ಈ ಕೋಷ್ಟಕವನ್ನು ತುಂಬಿ, ಕೋಷ್ಟಕದ ಬೆಲೆಗಳನ್ನು ಪರಿಶೀಲಿಸಿ. $m + 10 = 15$ ಸಮೀಕರಣದ ಪರಿಹಾರವನ್ನು ಕಂಡುಹಿಡಿಯಿರಿ.

| $m$ | 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|---|
| $m + 10$ | 11 | 12 | 13 | 14 | 15 | 16 | 17 | 18 | 19 |

$\therefore m = 5$

(b) ಈ ಕೋಷ್ಟಕವನ್ನು ತುಂಬಿ, ಕೋಷ್ಟಕದ ಬೆಲೆಗಳನ್ನು ಪರಿಶೀಲಿಸಿ. $5t = 35$ ಸಮೀಕರಣದ ಪರಿಹಾರವನ್ನು ಕಂಡುಹಿಡಿಯಿರಿ.

| $t$ | 3 | 4 | 5 | 6 | 7 | 8 | 9 | 10 | 11 |
|---|---|---|---|---|---|---|---|---|---|
| $5t$ | 15 | 20 | 25 | 30 | 35 | 40 | 45 | 50 | 55 |

$\therefore t = 5$

(c) ಈ ಕೋಷ್ಟಕವನ್ನು ತುಂಬಿ, ಕೋಷ್ಟಕದ ಬೆಲೆಗಳನ್ನು ಪರಿಶೀಲಿಸಿ. $\frac{z}{3}=4$ ಸಮೀಕರಣದ ಪರಿಹಾರವನ್ನು ಕಂಡುಹಿಡಿಯಿರಿ.

| $z$ | 8 | 9 | 10 | 11 | 12 | 13 | 14 | 15 | 19 |
|---|---|---|---|---|---|---|---|---|---|
| $\frac{z}{3}$ | $2\frac{2}{3}$ | 3 | $3\frac{1}{3}$ | $3\frac{2}{3}$ | 4 | $4\frac{1}{3}$ | $4\frac{2}{3}$ | 5 | $5\frac{1}{3}$ |

$$\therefore z = 12$$

(d) ಈ ಕೋಷ್ಟಕವನ್ನು ತುಂಬಿ, ಕೋಷ್ಟಕದ ಬೆಲೆಗಳನ್ನು ಪರಿಶೀಲಿಸಿ. $m-7=3$ ಸಮೀಕರಣದ ಪರಿಹಾರವನ್ನು ಕಂಡುಹಿಡಿಯಿರಿ.

| $m$ | 5 | 6 | 7 | 8 | 9 | 10 | 11 | 12 | 13 |
|---|---|---|---|---|---|---|---|---|---|
| $m-7$ | -2 | -1 | 0 | 1 | 2 | 3 | 4 | 5 | 6 |

$$\therefore m = 10$$

ಶ್ರೀ. ಜಿ. ಜಿ. ಕೋಲಾರ

# ಅಧ್ಯಾಯ – 12
# ಅನುಪಾತ ಮತ್ತು ಸಮಾನುಪಾತ

## ಅಭ್ಯಾಸ 12.1

1. ಒಂದು ತರಗತಿಯಲ್ಲಿ 20 ಹುಡುಗಿಯರು ಮತ್ತು 15 ಹುಡುಗರಿದ್ದಾರೆ.

a) ಹುಡುಗಿಯರ ಸಂಖ್ಯೆಗೂ ಹುಡುಗರ ಸಂಖ್ಯೆಗೂ ಇರುವ ಅನುಪಾತವೇನು?

- ಹುಡುಗರು : ಹುಡುಗಿಯರು

  = 20 : 15

  = 4 : 3

b) ಹುಡುಗಿಯರ ಸಂಖ್ಯೆಗೂ ತರಗತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೂ ಇರುವ ಅನುಪಾತ

- ಹುಡುಗಿಯರು : ಒಟ್ಟು ವಿದ್ಯಾರ್ಥಿಗಳು

  = 20 : 35

  = 4 : 7

2. ಒಂದು ತರಗತಿಯ 30 ವಿದ್ಯಾರ್ಥಿಗಳಲ್ಲಿ 6 ಜನ ಪುಟ್‌ಬಾಲ್, 12 ಜನ ಕ್ರಿಕೆಟ್ ಉಳಿದವರು ಟೆನ್ನಿಸ್ ಇಷ್ಟಪಡುತ್ತಾರೆ.

a) ಪುಟ್ ಬಾಲ್ ಇಷ್ಟಪಡುವವರ ಸಂಖ್ಯೆಗೂ ಟೆನ್ನಿಸ್ ಇಷ್ಟಪಡುವವರ ಸಂಖ್ಯೆಗೂ ಇರು ಅನುಪಾತವೇನು?

- ಟೆನ್ನಿಸ್ ಇಷ್ಟ ಪಡುವವರ ಸಂಖ್ಯೆ

  = 30 – (6+12)

  = 30 – 18

  = 12

- ಪುಟ್‌ಬಾಲ್ : ಟೆನ್ನಿಸ್

  = 6 : 12

  = 1 : 2

b) ಕ್ರಿಕೆಟ್ ಇಷ್ಟಪಡುವವರ ಸಂಖ್ಯೆಗೂ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೂ ಇರುವ ಅನುಪಾತವೇನು?

- ಕ್ರಿಕೆಟ್ : ಒಟ್ಟು ವಿದ್ಯಾರ್ಥಿಗಳು

  = 12 : 30

  = 2 : 5

3. ಚಿತ್ರ ಗಮನಿಸಿ. ಈ ಕೆಳಗಿನ ಅನುಪಾತಗಳನ್ನು ಕಂಡುಹಿಡಿಯಿರಿ.



a) ಆಯತದೊಳಗಿನ ತ್ರಿಭುಜಗಳ ಸಂಖ್ಯೆಗೂ ವೃತ್ತಗಳ ಸಂಖ್ಯೆಗೂ ಇರುವ ಅನುಪಾತ

- ತ್ರಿಭುಜಗಳು : ವೃತ್ತಗಳು

  = 3 : 2

b) ಆಯತದೊಳಗಿನ ಚೌಕಗಳ ಸಂಖ್ಯೆಗೂ ಎಲ್ಲ ಚಿತ್ರಗಳ ಸಂಖ್ಯೆಗೂ ಇರುವ ಅನುಪಾತ.

- ಚೌಕಗಳು : ಎಲ್ಲಾ ಚಿತ್ರಗಳು

  = 2 :7

c) ಆಯತದೊಳಗಿನ ವೃತ್ತಗಳ ಸಂಖ್ಯೆಗೂ ಎಲ್ಲಾ ಚಿತ್ರಗಳ ಸಂಖ್ಯೆಗೂ ಇರುವ ಅನುಪಾತ.

- ವೃತ್ತಗಳು : ಎಲ್ಲಾ ಚಿತ್ರಗಳು

  = 2 : 7

4. ಒಂದು ಗಂಟೆಯಲ್ಲಿ ಹಮೀದ್ ಮತ್ತು ಅಕ್ತರ್ ಪ್ರಯಾಣಿಸಿದ ದೂರಗಳು ಕ್ರಮವಾಗಿ 9 ಕಿ.ಮೀ ಮತ್ತು 12 ಕಿ.ಮೀ ಆಗಿದೆ. ಹಮೀದ್‌ನ ವೇಗಕ್ಕೂ ಅಕ್ತರನ ವೇಗಕ್ಕೂ ಇರುವ ಅನುಪಾತ ಕಂಡುಹಿಡಿಯಿರಿ.

- ಹಮೀದ್‌ನ ವೇಗ : ಅಕ್ತರ್‌ನ ವೇಗ

  = 9 : 12

  = 3 : 4

5. ಬಿಟ್ಟ ಸ್ಥಳ ತುಂಬಿ.

- $\frac{15}{18} = \frac{[5]}{6} = \frac{10}{[12]} = \frac{[25]}{30}$
- ಇವು ಸಮಾನ ಅನುಪಾತಗಳಾಗಿವೆ.

6. ಮುಂದಿನವುಗಳಿಗೆ ಇರುವ ಅನುಪಾತ ಕಂಡುಹಿಡಿಯಿರಿ.

a) 81 ಮತ್ತು 108 ಕ್ಕೆ

- 81 : 108

  (81 ಮತ್ತು 108 ರ ಮ.ಸಾ.ಅ = 21)

  $\frac{81}{21} : \frac{108}{21}$ = 3 : 4

b) 98 ಮತ್ತು 63 ಕ್ಕೆ

- 98 : 63

  (98 ಮತ್ತು 63 ರ ಮ.ಸಾ.ಅ = 7)

  $\frac{98}{7} : \frac{63}{7}$ = 14 : 7

c) 33 ಕಿ.ಮೀ ಮತ್ತು 121 ಕಿ.ಮೀ ಗೆ

- 33 : 121

  (33 ಮತ್ತು 121 ರ ಮ.ಸಾ.ಅ = 11)

  $\frac{33}{11} : \frac{121}{11}$ = 3 : 11

d) 30 ನಿಮಿಷ ಮತ್ತು 45 ನಿಮಿಷಗಳಿಗೆ

- 30 : 45

  (30 ಮತ್ತು 45 ರ ಮ.ಸಾ.ಅ = 15)

  $\frac{30}{15} : \frac{45}{15}$ = 2 : 3

**7. ಮುಂದಿನವುಗಳಿಗೆ ಇರುವ ಅನುಪಾತ ಕಂಡುಹಿಡಿಯಿರಿ.**

a) 30 ನಿಮಿಷಗಳು ಮತ್ತು 1.5 ಗಂಟೆಗಳು

- 1 ಗಂಟೆ = 60 ನಿಮಿಷಗಳು

  1.5 ಗಂಟೆ = 1.5 × 60 = 90 ನಿಮಿಷಗಳು

  30 ನಿಮಿಷಗಳು : 90 ನಿಮಿಷಗಳು

  (30 ಮತ್ತು 90 ರ ಮ.ಸಾ.ಅ = 30)

  $\frac{30}{30} : \frac{90}{30}$ = 1 : 3

b) 40 ಸೆಂ.ಮೀ ಮತ್ತು 1.5 ಮೀ ಗೆ

- 1 ಮೀ = 100 ಸೆಂ.ಮೀ

  1.5 ಮೀ = 100 × 1.5 = 150 ಸೆಂ.ಮೀ

  40 ಸೆಂ.ಮೀ : 150 ಸೆಂ.ಮೀ

  (40 ಮತ್ತು 150 ರ ಮ.ಸಾ.ಅ = 10)

  $\frac{40}{10} : \frac{150}{10}$ = 4 : 15

c) 55 ಪೈಸೆ ಮತ್ತು ರೂ. 1 ಕ್ಕೆ

- 1 ರೂ = 100 ಪೈಸೆ

  55 ಪೈಸೆ : 100 ಪೈಸೆ

  (55 ಮತ್ತು 100 ರ ಮ.ಸಾ.ಅ = 5)

  $\frac{55}{5} : \frac{100}{5}$ = 11 : 20

d) 500 ಮಿ.ಲೀ ಮತ್ತು 2 ಲೀಟರ್‌ಗಳಿಗೆ.

- 1 ಲೀ = 1000 ಮಿ.ಲೀ

  2 ಲೀ = 2000 ಮಿ.ಲೀ

  500 ಮಿ.ಲೀ : 2000 ಮಿ.ಲೀ

  (500 ಮತ್ತು 2000 ರ ಮ.ಸಾ.ಅ = 500)

  $\frac{500}{500} : \frac{2000}{500}$ = 1 : 4

**8. ಒಂದು ವರ್ಷದಲ್ಲಿ ಸೀಮಾ ರೂ. 1,50,000 ಸಂಪಾದಿಸಿ ರೂ. 50,000 ಉಳಿತಾಯ ಮಾಡುತ್ತಳೆ. ಅವಳು**

a) ಸಂಪಾದಿಸಿದ ಹಣಕ್ಕೂ ಉಳಿತಾಯ ಮಾಡಿದ ಹಣಕ್ಕೂ ಇರುವ ಅನುಪಾತ ಕಂಡುಹಿಡಿಯಿರಿ.

- ಸಂಪಾದಿಸಿದ ಹಣ : ಉಳಿತಾಯ ಮಾಡಿದ ಹಣ

  = 1,50,000 : 50,000

  = 3 : 1

b) ಉಳಿತಾಯ ಮಾಡಿದ ಹಣಕ್ಕೂ ಖರ್ಚು ಮಾಡಿದ ಹಣಕ್ಕೂ ಇರುವ ಅನುಪಾತ ಕಂಡುಹಿಡಿಯಿರಿ.

- ಖರ್ಚು ಮಾಡಿದ ಹಣ = 1,50,000 - 50,000

  = 1,00,000

  ಉಳಿತಾಯ ಮಾಡಿದ ಹಣ : ಖರ್ಚು ಮಾಡಿದ ಹಣ

  = 50,000 : 1,00,000

  = 1 : 2

**9. 3300 ವಿದ್ಯಾರ್ಥಿಗಳಿರುವ ಶಾಲೆಯಲ್ಲಿ 102 ಶಿಕ್ಷಕರಿದ್ದಾರೆ. ಶಿಕ್ಷಕರ ಸಂಖ್ಯೆಗೂ ವಿದ್ಯಾರ್ಥಿಗಳ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.**

- ವಿದ್ಯಾರ್ಥಿಗಳ ಸಂಖ್ಯೆ = 3300

  ಶಿಕ್ಷಕರ ಸಂಖ್ಯೆ = 102

  ಶಿಕ್ಷಕರ ಸಂಖ್ಯೆ : ವಿದ್ಯಾರ್ಥಿಗಳ ಸಂಖ್ಯೆ

  = 102 : 3300

  = 17 : 550

**10. ಒಂದು ಕಾಲೇಜಿನ 4320 ವಿದ್ಯಾರ್ಥಿಗಳಲ್ಲಿ 2300 ಹುಡುಗಿಯರಿದ್ದಾರೆ.**

a) ಹುಡುಗಿಯರ ಸಂಖ್ಯೆಗೂ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಹುಡುಗಿಯರು : ಒಟ್ಟು ವಿದ್ಯಾರ್ಥಿಗಳು

= 2300 : 4320

= 115 : 216

b) ಹುಡುಗರ ಸಂಖ್ಯೆಗೂ ಹಡುಗಿಯರ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಹುಡುಗರ ಸಂಖ್ಯೆ = 4320 – 2300

  = 2020

  ಹುಡಗರು : ಹುಡುಗಿಯರು

  = 2020 : 2300

  =101 : 115

c) ಹುಡುಗರ ಸಂಖ್ಯೆಗೂ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಹುಡುಗರು : ಒಟ್ಟು ವಿದ್ಯಾರ್ಥಿಗಳು

  = 2020 : 4320

  = 101 : 216

11. ಒಂದು ಶಾಲೆಯ 1800 ವಿದ್ಯಾರ್ಥಿಗಳಲ್ಲಿ, 750 ಮಂದಿ ಬಾಸ್ಕೆಟ್ ಬಾಲ್, 800 ಮಂದಿ ಕ್ರಿಕೆಟ್ ಮತ್ತು ಉಳಿದವರು ಟೇಬಲ್ ಟೆನ್ನಿಸ್ ಆಯ್ಕೆ ಮಾಡಿಕೊಳ್ಳುತ್ತಾರೆ. ಒಬ್ಬ ವಿದ್ಯಾರ್ಥಿ ಒಂದು ಆಟವನ್ನು ಮಾತ್ರ ಆಯ್ಕೆ ಮಾಡಿಕೊಂಡರೆ

a) ಬಾಸ್ಕೆಟ್ ಬಾಲ್ ಆಯ್ಕೆ ಮಾಡಿಕೊಂಡವರ ಸಂಖ್ಯೆಗೂ ಟೇಬಲ್ ಟೆನ್ನಿಸ್ ಆಯ್ಕೆ ಮಾಡಿಕೊಂಡವರ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಟೇಬಲ್ ಟೆನ್ನಿಸ್ ಆಯ್ಕೆ ಮಾಡಿಕೊಂಡವರ ಸಂಖ್ಯೆ = 1800 – (750 +800)

  = 1800 – 1550

  = 250

  ಬಾಸ್ಕೆಟ್ ಬಾಲ್ : ಟೇಬಲ್ ಟೆನ್ನಿಸ್

  = 750 : 250

  = 3 : 1

b) ಕ್ರಿಕೆಟ್ ಆಯ್ಕೆ ಮಾಡಿಕೊಂಡವರ ಸಂಖ್ಯೆಗೂ ಬಾಸ್ಕೆಟ್ ಬಾಲ್ ಆಯ್ಕೆ ಮಾಡಿಕೊಂಡವರ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಕ್ರಿಕೆಟ್ : ಬಾಸ್ಕೆಟ್ ಬಾಲ್

  = 800 : 750

  =16 : 15

c) ಬಾಸ್ಕೆಟ್ ಬಾಲ್ ಆಯ್ಕೆ ಮಾಡಿಕೊಂಡವರ ಸಂಖ್ಯೆಗೂ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಕ್ರಿಕೆಟ್ : ಒಟ್ಟು ವಿದ್ಯಾರ್ಥಿಗಳು

  = 800 : 1800

  = 5 : 12

12. ಒಂದು ಡಜನ್ ಪೆನ್‌ಗಳ ಬೆಲೆ ರೂ. 180 ಮತ್ತು 8 ಬಾಲ್‌ಪೆನ್‌ಗಳ ಬೆಲೆ ರೂ. 56 ಒಂದು ಪೆನ್ ಬೆಲೆಗೂ ಒಂದು ಬಾಲ್‌ಪೆನ್ ಬೆಲೆಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಒಂದು ಡಜನ್ ಪೆನ್‌ಗಳ ಬೆಲೆ = ರೂ. 180

  ಒಂದು ಪೆನ್‌ನ ಬೆಲೆ = $\frac{180}{12}$ = ರೂ. 15

  8 ಬಾಲ್‌ಪೆನ್ನಳ ಬೆಲೆ = ರೂ. 56

  ಒಂದು ಬಾಲ್‌ಪೆನ್‌ನ ಬೆಲೆ = $\frac{56}{8}$ = ರೂ. 7

  ಒಂದು ಪೆನ್ : ಒಂದು ಬಾಲ್ ಪೆನ್

  = 15 : 7

13. ಈ ಹೇಳಿಕೆಯನನು ಗಮನಿಸಿ: ಒಂದು ಸಭಾಂಗಣ ಅಗಲ ಮತ್ತುಉದ್ದ ಅನುಪಾತ 2 : 5 ಆಗಿದೆ. ಸಭಾಂಗಣದ ಅಗಲ ಮತ್ತು ಉದ್ದಗಳ ಸಾಧ್ಯತೆಗಳನ್ನು ತೋರಿಸುವ ಮುಂದಿನ ಕೋಷ್ಟಕವನ್ನು ಪೂರ್ಣಗೊಳಿಸಿ.

| | | | |
|---|---|---|---|
| ಸಭಾಂಗಣದ ಅಗಲ (ಮೀ ನಲ್ಲಿ) | 10 | **20** | 40 |
| ಸಭಾಂಗಣದ ಉದ್ದ (ಮೀ.ನಲ್ಲಿ) | 25 | 50 | **100** |

14. ಶೀಲ ಮತ್ತು ಸಂಗೀತ ನಡುವೆ 20 ಪೆನ್‌ಗಳನ್ನು 3 : 2 ಅನುಪಾತದಲ್ಲಿ ವಿಭಾಗಿಸಿ.

- ಒಟ್ಟು ಪೆನ್ನುಗಳು =20

  ಅನುಪಾತಗಳ ಮೊತ್ತ = 3 + 2 = 5

  ಶೀಲಗೆ ದೊರೆಯುವ ಪೆನ್ನುಗಳು $= \frac{3}{5} \times 20 = 12$

  ಸಂಗೀತಗೆ ದೊರೆಯುವ ಪೆನ್ನುಗಳು $= \frac{2}{5} \times 20 = 8$

15. ತಾಯಿಯು ತನ್ನ ಮಕ್ಕಳಾದ ಶ್ರೇಯ ಮತ್ತು ಭೂಮಿಕಾಗೆ ರೂ. 36 ನ್ನು ಅವರ ವಯಸ್ಸಿನ ಅನುಪಾತದಲ್ಲಿ ವಿಭಾಗಿಸಲು ಬಯಸುತ್ತಾಳೆ. ಶ್ರೇಯಾಳ ವಯಸ್ಸು 15 ವರ್ಷ ಮತ್ತು ಭೂಮಿಕಾಳ ವಯಸ್ಸು 12 ವರ್ಷಗಳಾಗಿದ್ದರೆ, ಶ್ರೇಯ ಮತ್ತು ಭೂಮಿಕಾ ಎಷ್ಟು ಹಣ ಪಡೆಯುತ್ತಾರೆ ಕಂಡುಹಿಡಿಯಿರಿ.

- ಶ್ರೇಯಾಳ ವಯಸ್ಸು 15 ವರ್ಷ
  ಭೂಮಿಕಾಳ ವಯಸ್ಸು 12 ವರ್ಷ
  ಶ್ರೇಯಾ ಮತ್ತು ಭೂಮಿಕಾಳ ವಯಸ್ಸುಗಳ ಅನುಪಾತ = 15 : 12 = 5 : 4
  ತಾಯಿಯ ವಿಭಾಗಿಸಲು ಬಯಸಿರು ಒಟ್ಟು ಹಣ = ರೂ. 36
  ವಯಸ್ಸುಗಳ ಅನುಪಾತಗಳ ಮೊತ್ತ = 5 + 4 = 9
  ಶ್ರೇಯಾಗೆ ದೊರೆಯುವ ಹಣ = $\frac{5}{9} \times 36 = 20$
  ಭೂಮಿಕಾಗೆ ದೊರೆಯುವ ಹಣ = $\frac{4}{9} \times 36 = 16$

16. ತಂದೆಯ ಈಗಿನ ವಯಸ್ಸು 42 ವರ್ಷ ಮತ್ತು ಮಗನ ವಯಸ್ಸು 14 ವರ್ಷ ಆಗಿದೆ.

a) ತಂದೆಯ ಈಗಿನ ವಯಸ್ಸಿಗೂ ಮಗನ ಈಗಿನ ವಯಸ್ಸಿಗೂ ಇರುವ ಅನುಪಾತ ಕಂಡುಹಿಡಿಯಿರಿ.

- ತಂದೆಯ ಈಗಿನ ವಯಸ್ಸು : ಮಗನ ಈಗಿನ ವಯಸ್ಸು
  = 42 : 14
  = 3 : 1

b) ಮಗನ ವಯಸ್ಸು 12 ವರ್ಷವಾಗಿದ್ದಾಗ, ತಂದೆಯ ವಯಸ್ಸಿಗೂ ಇರುವ ಅನುಪಾತ ಕಂಡುಹಿಡಿಯಿರಿ.

- ಮಗನ ವಯಸ್ಸು 12 ವರ್ಷವಾಗಿದ್ದಾಗ ತಂದೆಯ ವಯಸ್ಸು 40 ವರ್ಷಗಳಾಗಿರುತ್ತವೆ
  ಅವುಗಳ ಅನುಪಾತ
  = 40 : 12
  = 10 : 3

c) 10 ವರ್ಷದ ನಂತರ ತಂದೆಯ ವಯಸ್ಸಿಗೂ 10 ವರ್ಷದ ನಂತರ ಮಗನ ವಯಸ್ಸಿಗೂ ಇರುವ ಅನುಪಾತ ಕಂಡುಹಿಡಿಯಿರಿ.

- 10 ವರ್ಷದ ನಂತರ ತಂದೆಯ ವಯಸ್ಸು = 52
  10 ವರ್ಷದ ನಂತರ ಮಗನ ವಯಸ್ಸು = 24
  ಇವುಗಳ ಅನುಪಾತ,
  = 52 : 24
  =13 : 6

d) ತಂದೆಯ ವಯಸ್ಸು 30 ವರ್ಷವಾಗಿದ್ದಾಗ ತಂದೆಯ ವಯಸ್ಸಿಗೂ ಮಗನ ವಯಸ್ಸಿಗೂ ಇರುವ ಅನುಪಾತ ಕಂಡುಹಿಡಿಯಿರಿ.

- ತಂದೆಯ ವಯಸ್ಸು 30 ವರ್ಷವಾಗಿದ್ದಾಗ ಮಗನ ವಯಸ್ಸು 2 ವರ್ಷ ಆಗಿರುತ್ತವೆ.
  ಅವುಗಳ ಅನುಪಾತ,
  = 30 : 2
  = 15 : 1

# ಅಭ್ಯಾಸ 12.2

1. ಮುಂದಿನವುಗಳು ಸಮಾನುಪಾತದಲ್ಲಿವೆಯೇ? ನಿರ್ಧರಿಸಿ.

a) 15, 45, 40, 120

➢ 15 ಮತ್ತು 45 ರ ಅನುಪಾತ = $\frac{15}{45}$ = 1 : 3

40 ಮತ್ತು 120 ರ ಅನುಪಾತ = $\frac{40}{120}$ = 1 : 3

15 : 45 = 40 : 120 ಆಗಿರುವುದರಿಂದ 15, 45, 40, 120 ಸಮಾನುಪಾತದಲ್ಲಿವೆ.

b) 33, 121, 9, 96

➢ 33 ಮತ್ತು 121 ರ ಅನುಪಾತ = $\frac{33}{121}$ = 3 : 11

9 ಮತ್ತು 96 ರ ಅನುಪಾತ = $\frac{9}{96}$ = 3 : 32

33 : 121 ≠ 9 : 96 ಆಗಿರುವುದರಿಂದ 33, 121, 9, 96 ಸಮಾನುಪಾತದಲ್ಲಿಲ್ಲ.

c) 24, 28, 36, 48

➢ 24 ಮತ್ತು 28 ರ ಅನುಪಾತ = $\frac{24}{28}$ = 6 : 7

36 ಮತ್ತು 48 ರ ಅನುಪಾತ = $\frac{36}{48}$ = 3 : 4

24 : 28 ≠ 36 : 48 ಆಗಿರುವುದರಿಂದ 24, 28, 36, 48 ಸಮಾನುಪಾತದಲ್ಲಿಲ್ಲ.

d) 32, 48, 70, 210

➢ 32 ಮತ್ತು 48 ರ ಅನುಪಾತ = $\frac{32}{48}$ = 2 : 3

70 ಮತ್ತು 210 ರ ಅನುಪಾತ = $\frac{70}{210}$ = 1 : 3

32 : 48 ≠ 70 : 210 ಆಗಿರುವುದರಿಂದ 32, 48, 70, 210 ಸಮಾನುಪಾತದಲ್ಲಿಲ್ಲ.

e) 4, 6, 8, 12

➢ 4 ಮತ್ತು 6 ರ ಅನುಪಾತ = $\frac{4}{6}$ = 2 : 3

8 ಮತ್ತು 12 ರ ಅನುಪಾತ = $\frac{8}{12}$ = 2 : 3

4 : 6 = 8 : 12 ಆಗಿರುವುದರಿಂದ 4, 6, 8, 12 ಸಮಾನುಪಾತದಲ್ಲಿವೆ.

f) 33, 44, 75, 100

➢ 33 ಮತ್ತು 44 ರ ಅನುಪಾತ = $\frac{33}{44}$ = 3 : 4

75 ಮತ್ತು 100 ರ ಅನುಪಾತ = $\frac{75}{100}$ = 3 : 4

33 : 44 = 75 : 100 ಆಗಿರುವುದರಿಂದ 33, 44, 75, 100 ಸಮಾನುಪಾತದಲ್ಲಿವೆ.

2. ಮುಂದೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿ ಅಥವಾ ತಪ್ಪು ಎಂದು ತಿಳಿಸಿ.

a) 16 : 24 : : 20 : 30

➢ 16 : 24 = 2 : 3

20 : 30 = 2 : 3

16 : 24 = 20 : 30

ಆದ್ದರಿಂದ 16 : 24 : : 20 : 30 ಇದು ಸರಿಯಾಗಿದೆ.

b) 21 : 6 : : 35 : 10

➢ 21 : 6 = 7 : 2

35 : 10 = 7 : 2

21 : 6 = 35 : 10

ಆದ್ದರಿಂದ 21 : 6 : : 35 : 10 ಇದು ಸರಿಯಾಗಿದೆ.

c) 12 : 18 : : 28 : 12

➢ 12 : 18 = 2 : 3

28 : 12 = 7 : 3

12 : 18 ≠ 28 : 12

ಆದ್ದರಿಂದ 12 : 18 : : 28 : 12 ಇದು ತಪ್ಪಾಗಿದೆ.

d) 8 : 9 : : 24 : 27

➢ 8 : 9 = 8 : 9

24 : 27 = 8 : 9

8 : 9 = 24 : 27

ಆದ್ದರಿಂದ 8 : 9 : : 24 : 27 ಇದು ಸರಿಯಾಗಿದೆ.

e) 5.2 : 3.9 : : 3 : 4

➢ 5.2 : 3.9 = 4 : 3

3 : 4 = 3 : 4

5.2 : 3.9 ≠ 3 : 4

ಆದ್ದರಿಂದ 5.2 : 3.9 : : 3 : 4 ಇದು ತಪ್ಪಾಗಿದೆ.

f) 0.9 : 0.36 : : 10 : 4

➢ 0.9 : 0.36 = 5 : 2

10 : 4 = 5 : 2

0.9 : 0.36 = 10 : 4

ಆದ್ದರಿಂದ 0.9 : 0.36 : : 10 : 4 ಇದು ಸರಿಯಾಗಿದೆ.

3. ಮುಂದೆ ನೀಡಿರುವ ಹೇಳಿಕೆಗಳು ಸರಿಯೇ?

a) 40 ಜನ : 200 ಜನ = ರೂ.15 : ರೂ. 75

➢ 40 : 200 = 1 : 5
15 : 75 = 1 : 5
40 : 200 = 15 : 75

ಆದ್ದರಿಂದ 40 ಜನ : 200 ಜನ = ರೂ.15 : ರೂ. 75 ಸರಿಯಾಗಿದೆ.

b) 7.5 ಲೀ : 15 ಲೀಟರ್ = 5 ಕೆ.ಜಿ : 10 ಕೆ.ಜಿ

➢ 7.5 : 15 = 1 : 2
5 : 10 = 1 : 2
7.5 : 15 = 5 : 10

ಆದ್ದರಿಂದ 7.5 ಲೀ : 15 ಲೀಟರ್ = 5 ಕೆ.ಜಿ : 10 ಕೆ.ಜಿ ಸರಿಯಾಗಿದೆ.

c) 99 ಕೆ.ಜಿ : 45 ಕೆ.ಜಿ = ರೂ. 44 : ರೂ. 20

➢ 99 : 45 = 11 : 5
44 : 20 = 11 : 5
99 : 45 = 44 : 20

ಆದ್ದರಿಂದ 99 ಕೆ.ಜಿ : 45 ಕೆ.ಜಿ = ರೂ. 44 : ರೂ. 20 ಸರಿಯಾಗಿದೆ.

d) 32 ಮೀ : 64 ಮೀ = 6 ಸೆಕೆಂಡ್ : 12 ಸೆಕೆಂಡ್

➢ 32 : 64 = 1 : 2
6 : 12 = 1 : 2
32 : 64 = 6 : 12

ಆದ್ದರಿಂದ 32 ಮೀ : 64 ಮೀ = 6 ಸೆಕೆಂಡ್ : 12 ಸೆಕೆಂಡ್ ಸರಿಯಾಗಿದೆ.

e) 45 ಕಿ.ಮೀ : 60 ಕಿ.ಮೀ : 12 ಗಂಟೆ : 15 ಗಂಟೆ

➢ 45 : 60 = 3 : 4
12 : 15 = 4 : 5
45 : 60 ≠ 12 : 15

ಆದ್ದರಿಂದ 45 ಕಿ.ಮೀ : 60 ಕಿ.ಮೀ : 12 ಗಂಟೆ : 15 ಗಂಟೆ ತಪ್ಪಾಗಿದೆ.

4. ಮುಂದೆ ನೀಡಿರುವ ಅನುಪಾತಗಳು ಸಮಾನುಪಾತದಲ್ಲಿವೆಯೇ ನಿರ್ಧರಿಸಿ. ಸಮಾನುಪಾತದಲ್ಲಿದ್ದಲ್ಲಿ ಅವುಗಳ ಮಧ್ಯಪದಗಳು ಮತ್ತು ಅಂತ್ಯ ಪದಗಳನ್ನು ಬರೆಯಿರಿ.

a) 25 ಸೆಂ.ಮೀ : 1 ಮೀ ಮತ್ತು ರೂ. 40 : ರೂ.160

➢ 25 : 100 = 1 : 4
40 : 160 = 1 : 4
25 : 100 = 40 : 160

ಆದ್ದರಿಂದ 25 ಸೆಂ.ಮೀ : 1 ಮೀ ಮತ್ತು ರೂ. 40 : ರೂ.160 ಸಮಾನುಪಾತದಲ್ಲಿವೆ.
ಮಧ್ಯಪದಗಳು = 1 ಮೀ ಮತ್ತು ರೂ. 40
ಅಂತ್ಯಪದಗಳು = 25 ಸೆಂ.ಮೀ ಮತ್ತು ರೂ. 160

b) 39 ಲೀ : 65 ಲೀ ಮತ್ತು 6 ಬಾಟಲ್‌ಗಳು : 10 ಬಾಟಲ್‌ಗಳು

➢ 39 : 65 = 3 :5
6 : 10 = 3 : 5
39 : 65 = 6 : 10

ಆದ್ದರಿಂದ 39 ಲೀ : 65 ಲೀ ಮತ್ತು 6 ಬಾಟಲ್‌ಗಳು : 10 ಬಾಟಲ್‌ಗಳು ಸಮಾನುಪಾತದಲ್ಲಿವೆ.
ಮಧ್ಯಪದಗಳು = 65 ಲೀ ಮತ್ತು 6 ಬಾಟಲ್‌ಗಳು
ಅಂತ್ಯಪದಗಳು = 39 ಲೀ ಮತ್ತು 10 ಬಾಟಲ್‌ಗಳು

c) 2 ಕಿ.ಜಿ : 80 ಕಿ.ಜಿ ಮತ್ತು 25 ಗ್ರಾಂ : 625 ಗ್ರಾಂ

➢ 2 : 80 = 1 : 40
25 : 625 = 1 : 25
2 : 80 ≠ 25 : 625

ಆದ್ದರಿಂದ 2 ಕಿ.ಜಿ : 80 ಕಿ.ಜಿ ಮತ್ತು 25 ಗ್ರಾಂ : 625 ಗ್ರಾಂ ಸಮಾನುಪಾತದಲ್ಲಿ ಇಲ್ಲ.

d) 200 ಮಿ.ಲೀ : 2.5 ಲೀ ಮತ್ತು ರೂ. 4 : ರೂ. 50

➢ 200 : 2500 = 2 : 25
4 : 50 = 2 : 25
200 : 2500 = 4 : 50

ಆದ್ದರಿಂದ 200 ಮಿ.ಲೀ : 2.5 ಲೀ ಮತ್ತು ರೂ. 4 : ರೂ. 50 ಸಮಾನುಪಾತದಲ್ಲಿವೆ.
ಮಧ್ಯಪದಗಳು = 2.5 ಲೀ ಮತ್ತು ರೂ. 4
ಅಂತ್ಯಪದಗಳು = 200 ಮಿ.ಲೀ ಮತ್ತು ರೂ.50

# ಅಭ್ಯಾಸ 12.3

1. 7 m ಬಟ್ಟೆಯ ಬೆಲೆ ರೂ. 1470 ಆದರೆ, 5 m ಬಟ್ಟೆಯ ಬೆಲೆ ಕಂಡುಹಿಡಿಯಿರಿ.

➢ 7 m ಬಟ್ಟೆಯ ಬೆಲೆ = ರೂ. 1470

1 m ಬಟ್ಟೆಯ ಬೆಲೆ = $\frac{1470}{7}$ = ರೂ. 210

∴ 5 m ಬಟ್ಟೆಯ ಬೆಲೆ = 210 × 5

= ರೂ. 1050

2. 10 ದಿನಗಳಲ್ಲಿ ಈಶ್ವರಿ ರೂ. 3000 ಸಂಪಾದಿಸುತ್ತಾಳೆ. 30 ದಿನಗಳಲ್ಲಿ ಅವಳು ಎಷ್ಟು ಹಣ ಸಂಪಾದಿಸುತ್ತಾಳೆ?

➢ 10 ದಿನಗಳಲ್ಲಿ ಈಶ್ವರಿಯ ಸಂಪಾದನೆ = ರೂ. 3000

1 ದಿನದ ಸಂಪಾದನೆ = $\frac{3000}{10}$ = ರೂ. 300

∴ 30 ದಿನಗಳ ಸಂಪಾದನೆ = 300 × 30

= ರೂ. 9000

3. ಕಳೆದ ಮೂರು ದಿನಗಳಲ್ಲಿ 276 mm ಮಳೆಯಾದರೆ, ಒಂದು ಪೂರ್ಣ ವಾರದಲ್ಲಿ (7ದಿನಗಳಲ್ಲಿ) ಎಷ್ಟು ಸೆಂ.ಮೀ ಮಳೆಯಾಘುತ್ತದೆ? ಮಳೆಯು ಒಂದೇ ಪ್ರಮಾಣದಲ್ಲಿ ಬೀಳುತ್ತದೆಯೆಂದು ಊಹಿಸಿಕೊಳ್ಳಿ.

➢ 3 ದಿನಗಳಲ್ಲಿ ಆದ ಮಳೆ = 276 mm

1 ದಿನದಲ್ಲಿ ಬೀಳುವ ಮಳೆ = $\frac{276}{3}$ = 92 mm

∴ 7 ದಿನಗಳಲ್ಲಿ ಬೀಲುವ ಮಳೆ = 92 × 7

= 644 mm = 64.4 ಸೆಂ.ಮೀ

4. 5 kg ಗೋಧಿಯ ಬೆಲೆ ರೂ. 91.50

a) 8 kg ಗೋಧಿಯ ಬೆಲೆ ಎಷ್ಟು?

➢ 5 kg ಗೋಧಿಯ ಬೆ = ರೂ. 91.50

1 kg ಗೋಧಿಯ ಬೆಲೆ= $\frac{91.50}{5}$ = ರೂ. 18.30

8 kg ಗೋಧಿಯ ಬೆಲೆ = 18.30 × 8

= ರೂ. 146.40

b) ರೂ. 183 ಕ್ಕೆ ಎಷ್ಟು ಪ್ರಮಾಣದ ಗೋಧಿ ಕೊಂಡುಕೊಳ್ಳಬಹುದು?

➢ ರೂ. 183 ಕ್ಕೆ ಕೊಂಡುಕೊಳ್ಳಬಹುದಾದ ಗೋಧಿಯ ಪ್ರಮಾಣ = $\frac{183}{18.30} = \frac{18300}{1830}$

= 10 kg

5. ಕಳೆದ 30 ದಿನಗಳಲ್ಲಿ 15° ಸೆಲ್ಸಿಯಸ್ ನಷ್ಟು ಉಷ್ಣತೆ ಕಡಿಮೆಯಾದರೆ. ಅದೇ ದರದಲ್ಲಿ ಉಷ್ಣತೆ ಕಡಿಮೆಯಾಗುತ್ತಾಹೋದರೆ, ಮುಂದಿನ ಹತ್ತು ದಿನಗಳಲ್ಲಿ ಎಷ್ಟು ಡಿಗ್ರಿ ಉಷ್ಣತೆ ಕಡಿಮೆಯಾಗುತ್ತದೆ?

➢ 30 ದಿನಗಳಲ್ಲಿ ಕಡಿಮೆ ಯಾಗುವ ಉಷ್ಣತೆ =15° ಸೆಲ್ಸಿಯಸ್

1 ದಿನದಲ್ಲಿ ಕಡಿಮೆಯಾಗುವ ಉಷ್ಣತೆ = $\frac{15}{30}$ = 0.5° ಸೆಲ್ಸಿಯಸ್

10 ದಿನಗಳಲ್ಲಿ ಕಡಿಮೆಯಾಘುವ ಉಷ್ಣತೆ =10 × 0.5 = 5° ಸೆಲ್ಸಿಯಸ್

6. ಶಾಲಿನಿ 3 ತಿಂಗಳಿಗೆ ರೂ. 15,000 ಬಾಡಿಗೆ ಕಟ್ಟುತ್ತಾಳೆ. ಪ್ರತಿ ತಿಂಗಳ ಬಾಡಿಗೆ ಅಷ್ಟೇ ಇದ್ದಲ್ಲಿ ವರ್ಷಕ್ಕೆ ಅವಳು ಎಷ್ಟು ಬಾಡಿಗೆ ಕಟ್ಟಬೇಕಾಗುತ್ತದೆ?

➢ ಶಾಲಿನಿ 3 ತಿಂಗಳಿಗೆ ಕಟ್ಟುವ ಬಾಡಿಗೆ = ರೂ. 15,000

1 ತಿಂಗಳಿಗೆ ಕಟ್ಟುವ ಬಾಡಿಗೆ = $\frac{15000}{3}$

= ರೂ. 5000

1 ವರ್ಷಕ್ಕೆ ಕಟ್ಟುವ ಬಾಡಿಗೆ = 5000 × 12

= ರೂ. 60,000

7. 4 ಡಜನ್ ಬಾಳೆ ಹಣ್ಣುಗಳ ಬೆಲೆ ರೂ.180, ರೂ 90 ಕ್ಕೆ ಎಷ್ಟು ಬಾಳೆ ಹಣ್ಣುಗಳನ್ನು ಕೊಂಡುಕೊಳ್ಳಬಹುದು?

➢ 4 ಡಜನ್ ಬಾಳೆ ಹಣ್ಣುಗಳ ಬೆಲೆ = ರೂ.180

1 ಡಜನ್ ಬಾಳೆ ಹಣ್ಣುಗಳ ಬೆಲೆ = $\frac{180}{4}$

= ರೂ. 45

ರೂ. 90 ಕ್ಕೆ ಕೊಂಡುಕೊಳ್ಳಬಹುದಾದ ಬಾಳೆಹಣ್ಣುಗಳ ಸಂಖ್ಯೆ =$\frac{90}{45}$ = 2 ಡಜನ್‌ಗಳು

8. 72 ಪುಸ್ತಕಗಳ ತೂಕ 9 kg ಅಂತಹ 40 ಪುಸ್ತಕಗಳ ತೂಕ ಎಷ್ಟು?

➢ 72 ಪುಸ್ತಕಗಳ ತೂಕ = 9 kg

1 ಪುಸ್ತಕದ ತೂಕ = $\frac{9}{72} = \frac{1}{8}$ kg

40 ಪುಸ್ತಕಗಳ ತೂಕ = 40 × $\frac{1}{8}$

= 5 kg

9. 594 km ದೂರ ಕ್ರಮಿಸಲು ಒಂದು ಟ್ರಕ್‌ಗೆ 108 ಲೀಟರ್ ಡೀಸೆಲ್ ಬೇಕಾಗುತ್ತದೆ. 1650 km ದೂರ ಕ್ರಮಿಸಲು ಟ್ರಕ್‌ಗೆ ಬೇಕಾಗುವ ಡೀಸೆಲ್‌ನ ಪ್ರಮಾಣ ಎಷ್ಟು?

- 594 km ದೂರ ಕ್ರಮಿಸಲು ಒಂದು ಟ್ರಕ್‌ಗೆ ಬೇಕಾಗುವ ಡೀಸೆಲ್ = 108 ಲೀ

  1 km ದೂರ ಕ್ರಮಿಸಲು ಬೇಕಾಗುವ ಡೀಸೆಲ್ $=\frac{108}{594}=\frac{2}{11}$ ಲೀ

  1650 km ಕ್ರಮಿಸಲು ಬೇಕಾಗುವ ಡೀಸೆಲ್ $=1650\times\frac{2}{11}=300$ ಲೀ

10. ರಾಜು ರೂ. 150 ಕ್ಕೆ 10 ಪೆನ್‌ಗಳನ್ನು ಕೊಂಡುಕೊಳ್ಳುತ್ತಾನೆ ಮತ್ತು ಮನಿಷ್ ರೂ 84 ಕ್ಕೆ 7 ಪೆನ್‌ಗಳನ್ನು ಕೊಂಡುಕೊಳ್ಳುತ್ತಾನೆ. ಯಾರಿಗೆ ಪೆನ್ನುಗಳು ಅಗ್ಗವಾಗಿ ಸಿಕ್ಕಿತು ಹೇಳಬಲ್ಲಿರಾ?

- ರಾಜು ರೂ. 150 ಕ್ಕೆ 10 ಪೆನ್‌ಗಳನ್ನು ಕೊಂಡುಕೊಳ್ಳುತ್ತಾನೆ.

  1 ಪೆನ್‌ನ ಬೆಲೆ $=\frac{150}{10}=$ ರೂ. 15

  ಮನಿಷ್ ರೂ 84 ಕ್ಕೆ 7 ಪೆನ್‌ಗಳನ್ನು ಕೊಂಡುಕೊಳ್ಳುತ್ತಾನೆ.

  1 ಪೆನ್‌ನ ಬೆಲೆ $=\frac{84}{7}=$ ರೂ. 12

  ∴ ಮನಿಷ್‌ಗೆ ಪೆನ್‌ಗಳು ಅಗ್ಗವಾಗಿ ಸಿಕ್ಕಿವೆ.

11. ಅನಿಷ್ 6 ಓವರ್‌ಗಳಿಗೆ 42 ರನ್ ಕೊಟ್ಟನು. ಮತ್ತು ಅನುಪ್ 7 ಓವರ್‌ಗಳಿಗೆ 63 ರನ್ ಕೊಟ್ಟಿನು. ಪ್ರತಿ ಓವರ್‌ಗೆ ಹೆಚ್ಚು ರನ್ ಯಾರು ಕೊಟ್ಟರು?

- ಅನಿಷ್ 6 ಓವರ್‌ಗಳಿಗೆ 42 ರನ್ ಕೊಟ್ಟನು.

  1 ಓವರ್‌ನಲ್ಲಿ ನೀಡಿದ ರನ್‌ಗಳು $=\frac{42}{6}=7$

  ಅನುಪ್ 7 ಓವರ್‌ಗಳಿಗೆ 63 ರನ್ ಕೊಟ್ಟಿನು

  1 ಓವರ್‌ನಲ್ಲಿ ನೀಡಿದ ರನ್‌ಗಳು $=\frac{63}{7}=9$

  ∴ ಅನುಪ್ ಪ್ರತಿ ಓವರ್‌ಗೆ ಹೆಚ್ಚು ರನ್‌ಗಳನ್ನು ಕೊಟ್ಟನು.

# ಅಧ್ಯಾಯ – 13
# ಸಮಮಿತಿ

## ಅಭ್ಯಾಸ 13.1

1. ನಿಮ್ಮ ಮನೆ ಅಥವಾ ಶಾಲೆಯಲ್ಲಿರುವ ಯಾವುದಾದರೂ 4 ಸಮಮಿತಿಯಲ್ಲಿರುವ ಆಕೃತಿಗಳನ್ನು ಪಟ್ಟಿ ಮಾಡಿ.

➢ ಕಪ್ಪುಹಲಗೆ, ಮೇಜು, ಕತ್ತರಿ, ಕಂಪ್ಯೂಟರ್ ಮಾನಿಟರ್ ಮುಂತಾದವುಗಳು

2. ಪಾರ್ಶ್ವದಲ್ಲಿರುವ ಆಕೃತಿಗೆ $l_1$ ಅಥವಾ $l_2$ ಗಳಲ್ಲಿ ಯಾವುದು ದರ್ಪಣ ರೇಖೆಯಾಗಿದೆ?




➢ $l_2$ ದರ್ಪಣ ರೇಖೇಯಾಗಿದೆ.

3. ಕೆಳಗೆ ಕೊಟ್ಟಿರುವ ಆಕೃತಿಗಳ ಆಕಾರವನ್ನು ಗುರುತಿಸಿ; ಇವು ಸಮಮಿತಿ ಆಕೃತಿಗಳೇ? ಸಮಮಿತಿ ಆಕೃತಿಗಳಾಗಿದ್ದಲ್ಲಿ ಸಮಮಿತಿ ಅಕ್ಷಗಳನ್ನು ಎಳೆಯಿರಿ.




➢ ಇವುಗಳಲ್ಲಿ (ಸಿ) ಯನ್ನು ಹೊರತು ಪಡಿಸಿ ಉಳಿದೆಲ್ಲವೂ ಸಮಮಿತಿ ಆಕೃತಿಗಳಾಗಿವೆ.




4. ಈ ಕೆಳಗಿನವುಗಳನ್ನು ಒಂದು ಚೌಕಳಿ ಹಾಳೆಯ ಮೇಲೆ ನಕಲು ಮಾಡಿ. ನೀವು ಹಿಂದಿನ ತರಗತಿಗಳಲ್ಲಿ ಇಂತಹ ಚೌಕಳಿ ಹಾಳೆಗಳನ್ನು ಅಂಕ ಗಣಿತದ ನೋಟ್ ಪುಸ್ತಕಗಳಲ್ಲಿ ಬಳಸಿದ್ದೀರಿ. ಈ ಕೆಳಗಿನ ಆಕೃತಿಗಳ ಚುಕ್ಕೆ ರೇಖೆಗಳು ಸಮಮಿತಿ ಅಕ್ಷಗಳಾಗುವಂತೆ ಆಕೃತಿಯನ್ನು ಪೂರ್ಣ ಮಾಡಿ.




ಪರಿಹಾರಗಳು :




5. ಪಾರ್ಶ್ವದಲ್ಲಿ ನೀಡಿರುವ ಆಕೃತಿಯಲ್ಲಿ $l$ ರೇಖೆಯು ಸಮಮಿತಿ ಅಕ್ಷವಾಗಿದೆ. ಆಕೃತಿಯು ಸಮಮಿತಿಯಾಗುವಂತೆ ಪೂರ್ಣಗೊಳಿಸಿ.




ಪರಿಹಾರ :



6. ಕೆಳಗಿನ ಆಕೃತಿಯಲ್ಲಿ ಸಮಮಿತಿ ರೇಖೆಯು *l* ಆಗಿದೆ. ತ್ರಿಭುಜದ ಪ್ರತಿಬಿಂಬವನ್ನು ರಚಿಸಿ, ಆಕೃತಿಯು ಸಮಮಿತಿ ಆಗುವಂತೆ ಪೂರ್ಣ ಮಾಡಿ.




ಪರಿಹಾರ :



# ಅಭ್ಯಾಸ 13.2

1. ಈ ಕೆಳಗಿನ ಪ್ರತಿಯೊಂದು ಚಿತ್ರದಲ್ಲಿರುವ ಸಮಮಿತಿ ರೇಖೆಗಳ ಸಂಖ್ಯೆಯನ್ನು ಕಂಡು ಹಿಡಿಯಿರಿ.




a) ಈ ಚಿತ್ರದಲ್ಲಿ 4 ಸಮಮಿತಿ ಅಕ್ಷಗಳಿವೆ.
b) ಈ ಚಿತ್ರದಲ್ಲಿ 4 ಸಮಮಿತಿ ಅಕ್ಷಗಳಿವೆ.
c) ಈ ಚಿತ್ರದಲ್ಲಿ 4 ಸಮಮಿತಿ ಅಕ್ಷಗಳಿವೆ.
d) ಈ ಚಿತ್ರದಲ್ಲಿ 1 ಸಮಮಿತಿ ಅಕ್ಷಗಳಿವೆ.
e) ಈ ಚಿತ್ರದಲ್ಲಿ 6 ಸಮಮಿತಿ ಅಕ್ಷಗಳಿವೆ.
f) ಈ ಚಿತ್ರದಲ್ಲಿ 6 ಸಮಮಿತಿ ಅಕ್ಷಗಳಿವೆ.
g) ಈ ಚಿತ್ರದಲ್ಲಿ ಯಾವುದೇ ಸಮಮಿತಿ ಅಕ್ಷಗಳಿಲ್ಲ.
h) ಈ ಚಿತ್ರದಲ್ಲಿ ಯಾವುದೇ ಸಮಮಿತಿ ಅಕ್ಷಗಳಿಲ್ಲ.
i) ಈ ಚಿತ್ರದಲ್ಲಿ 5 ಸಮಮಿತಿ ಅಕ್ಷಗಳಿವೆ.

2. ಈ ಕೆಳಗಿನ ಪ್ರತಿಯೊಂದು ತ್ರಿಭುಜಗಳನ್ನು ಚೌಕಳಿ ಕಾಗದದ ಮೇಲೆ ಬರೆದುಕೊಳ್ಳಿ. ಪ್ರತಿಯೊಂದಕ್ಕೂ ಸಮಮಿತಿ ರೇಖೆಯನ್ನು ಎಳೆಯಿರಿ ಮತ್ತು ಈ ತ್ರಿಭುಜಗಳ ವಿಧಗಳನ್ನು ಗುರ್ತಿಸಿ (ಇವುಗಳನ್ನು ಕಾಗದದ ಮೇಲೆ ಬರೆದುಕೊಂಡು ಮಡಿಕೆಮಾಡಿ ಸಮಮಿತಿಯನ್ನು ಕಂಡುಹಿಡಿಯುವುದು ನಿಮ್ಮಲ್ಲಿ ಕೆಲವರಿಗೆ ಇಷ್ಟವಾಗಬಹುದು)

(a)



- ಇದು ಸಮದ್ವಿಬಾಹು ತ್ರಿಭುಜವಾಗಿದೆ ಇದಕ್ಕೆ 1 ಸಮಮಿತಿ ಅಕ್ಷವಿದೆ.

(b)



- ಇದು ಸಮದ್ವಿಬಾಹು ತ್ರಿಭುಜವಾಗಿದೆ ಇದಕ್ಕೆ 1 ಸಮಮಿತಿ ಅಕ್ಷವಿದೆ.

(c)



- ಇದು ಲಂಬಕೋನ ತ್ರಿಭುಜವಾಗಿದೆ ಇದಕ್ಕೆ 1 ಸಮಮಿತಿ ಅಕ್ಷವಿದೆ.

d)



ಇದು ಅಸಮಬಾಹು ತ್ರಿಭುಜವಾಗಿದೆ ಇದಕ್ಕೆ ಯಾವುದೇ ಸಮಮಿತಿ ಅಕ್ಷಗಳಿಲ್ಲ.

3. ಈ ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿ.

| ಆಕೃತಿಗಳು | ಕಚ್ಚಾ ಚಿತ್ರ | ಸಮಮಿತಿ ರೇಖೆಗಳ ಸಂಖ್ಯೆ |
|---|---|---|
| ಸಮಬಾಹು ತ್ರಿಭುಜ |  | 3 |
| ಚೌಕ (ವರ್ಗ) |  | 4 |
| ಆಯತ |  | 2 |
| ಸಮದ್ವಿಬಾಹು ತ್ರಿಭುಜ |  | 1 |
| ವಜ್ರಾಕೃತಿ |  | 2 |
| ವೃತ್ತ |  | ಅಸಂಖ್ಯಾತ |

4. ಈ ಕೆಳಗಿನಂತೆ ತ್ರಿಭುಜವನ್ನು ರಚಿಸಲು ಸಾಧ್ಯವೇ? ಪ್ರತಿಯೊಂದಕ್ಕೂ ಒಂದು ಕಚ್ಚಾ ಚಿತ್ರವನ್ನು ರಚಿಸಿ.

a) ಒಂದೇ ಒಂದು ಸಮಮಿತಿ ರೇಖೆ ಇರುವ ತ್ರಿಭುಜ

- ರಚಿಸಬಹುದು, ಸಮದ್ವಿಬಾಹು ತ್ರಿಭುಜ



b) ಎರಡು ಸಮಮಿತಿ ರೇಖೆಗಳು ಮಾತ್ರ ಇರುವ ತ್ರಿಭುಜ

- ರಚಿಸಲು ಸಾಧ್ಯವಿಲ್ಲ.

c) ಮೂರು ಸಮಮಿತಿ ರೇಖೆಗಳಿರುವ ತ್ರಿಭುಜ

- ರಚಿಸಬಹುದು. ಸಮಬಾಹು ತ್ರಿಭುಜ



d) ಸಮಮಿತಿ ರೇಖೆ ಇಲ್ಲದ ತ್ರಿಭುಜ

- ರಚಿಸಬಹುದು, ಅಸಮಬಾಹು ತ್ರಿಭುಜ



5. ಚೌಕಳಿ ಕಾಗದದ ಮೇಲೆ ಈ ಕೆಳಗಿನ ಆಕೃತಿಗಳನ್ನು ರಚಿಸಿ.

a) ಕೇವಲ ಅಡ್ಡ ಸಮಮಿತಿ ರೇಖೆ ಮಾತ್ರವಿದ್ದು ನೇರ (ಲಂಬ) ಸಮಮಿತಿ ರೇಖೆ ಇರದ ತ್ರಿಭುಜ.



b) ಅಡ್ಡ ಮತ್ತು ಲಂಬ ಸಮಮಿತಿ ರೇಖೆಗಳಿರುವ ಒಂದು ಚತುರ್ಭುಜ.



c) ಅಡ್ಡ ಸಮಮಿತಿ ರೇಖೆ ಮಾತ್ರವಿದ್ದು ಲಂಬ(ನೇರ) ಸಮಮಿತಿ ರೇಖೆ ಇಲ್ಲ ಚತುರ್ಭುಜ.



d) ಎರಡೇ ಎರಡು ಸಮಮಿತಿ ರೇಖೆಗಳಿರುವ ಒಂದು ಷಡ್ಭುಜಾಕೃತಿ.



e) 6 ಸಮಮಿತಿ ರೇಖೆಗಳಿರುವ ಒಂದು ಷಡ್ಭುಜಾಕೃತಿ.



6. ಈ ಕೆಳಗಿನ ಆಕೃತಿಗಳನ್ನು ಚೌಕಳಿ ಕಾಗದದ ಮೇಲೆ ಬರೆದುಕೊಂಡು ಅವುಗಳಿಗೆ ಸಮಮಿತಿ ರೇಖೆಗಳನ್ನು ಎಳೆಯಿರಿ.

(a)



- ಇದರಲ್ಲಿ ಯಾವುದೇ ಸಮಮಿತಿ ರೇಖೆಗಳಿಲ್ಲ.

(b)



c)



(d)



(e)



(f)



7. ಇಂಗ್ಲೀಷ್ ಭಾಷೆಯ ಯಿಂದ ವರೆಗಿನ ಅಕ್ಷರಗಳನ್ನು ಗಮನಿಸಿ. ಇವುಗಳಲ್ಲಿ ಕೆಳಗೆ ಸೂಚಿಸಿರುವಂತೆ ಇರುವ ಅಕ್ಷರಗಳನ್ನು ಪಟ್ಟಿ ಮಾಡಿ.

a) ಲಂಬ ಸಮಮಿತಿ, ಇರುವ ಅಕ್ಷರಗಳು (A ನಲ್ಲಿರುವಂತೆ)

- A, H, I, M, O, T, U, V, W, X, Y

b) ಅಡ್ಡ ಸಮಮಿತಿ ರೇಖೆಗಳಿರುವ ಅಕ್ಷರಗಳು (B ನಲ್ಲಿರುವಂತೆ)

- B, C, D, E, H, I, K, O, X

c) ಸಮಮಿತಿ ರೇಖೆ ಇರದ ಅಕ್ಷರಗಳು (Q ನಲ್ಲಿರುವಂತೆ)

- F, G, J, L, N, P, Q, R, S, Z

8. ಈ ಕೆಳಗಿನ ಚಿತ್ರಗಳಲ್ಲಿ ಮಡಿಕೆ ಮಾಡಿದ ಕಾಗದ ಹಾಳೆಯ ಮೇಲೆ ಒಂದು ವಿನ್ಯಾಸವನ್ನು ಬರೆಯಲಾಗಿದೆ ಈ ವಿನ್ಯಾಸವನ್ನು ಕತ್ತರಿಸಿ ತೆರೆದಾಗ ಉಂಟಾಗುವ ಪೂರ್ಣ ಚಿತ್ರಗಳನ್ನು ಬರೆಯಿರಿ.





## ಅಭ್ಯಾಸ 13.3

1. ಈ ಕೆಳಗಿನ ಆಕೃತಿಗಳಲ್ಲಿ ಸಮಮಿತ ರೇಖೆಗಳ ಸಂಖ್ಯೆಗಳನ್ನು ಕಂಡುಹಿಡಿಯಿರಿ. ನಿಮ್ಮ ಉತ್ತರ ಸರಿ ಎಂದು ಹೇಗೆ ಪರೀಕ್ಷಿಸುವಿರಿ?

(a)



➢ ಈ ಚಿತ್ರದಲ್ಲಿ 4 ಸಮಮಿತಿ ರೇಖೆಗಳಿವೆ.

(b)



➢ ಈ ಚಿತ್ರದಲ್ಲಿ 1 ಸಮಮಿತಿ ರೇಖೆಯಿದೆ.

(c)



➢ ಈ ಚಿತ್ರದಲ್ಲಿ 2 ಸಮಮಿತಿ ರೇಖೆಗಳಿವೆ.

(d)



➢ ಈ ಚಿತ್ರದಲ್ಲಿ 2 ಸಮಮಿತಿ ರೇಖೆಗಳಿವೆ.

(e)



➢ ಈ ಚಿತ್ರದಲ್ಲಿ 1 ಸಮಮಿತಿ ರೇಖೆಯಿದೆ.

(f)



➤ ಈ ಚಿತ್ರದಲ್ಲಿ 2 ಸಮಮಿತಿ ರೇಖೆಗಳಿವೆ.

2. ಈ ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಚೌಕಳಿ ಕಾಗದದ ಮೇಲೆ ಬರೆದುಕೊಳ್ಳಿ. ಕೊಟ್ಟಿರುವ ಎರಡು ಚುಕ್ಕೆ ರೇಖೆಗಳು ಸಮಮಿತಿ ರೇಖೆಗಳಾಗಿರುವಂತೆ ಚಿತ್ರವನ್ನು ಪೂರ್ಣಗೊಳಿಸಿ.

(a)



(b)



(c)



(d)



(e)



(f)



3. ಈ ಪಾರ್ಶ್ವದಲ್ಲಿರುವ ಚಿತ್ರದಲ್ಲಿ ಲಂಬರೇಖೆಯಲ್ಲಿ ಒಂದು ಅಕ್ಷರವನ್ನು ಕೊಡಲಾಗಿದೆ. ಇವುಗಳ ದರ್ಪಣ ಪ್ರತಿಬಿಂಬವನ್ನು ದತ್ತರೇಖೆಯಲ್ಲಿ ಪಡೆಯಿರಿ. ಯಾವ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ. (ಅಕ್ಷರ ಮತ್ತು ಪ್ರತಿಬಿಂಬವು ಸಮನಾಗಿದೆ) ಮತ್ತು ಯಾವುದ ಸದೃಶ್ಯವಾಗಿಲ್ಲ? ಇದು ಏಕೆ ಹೀಗೆಂದು ಊಹಿಸುವಿರಾ?

ಈ ಅಕ್ಷರಗಳಿಗೂ ಪ್ರಯತ್ನಿಸಿ :

O, E, M, N, P, H, L, T, S, V, X




ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ




ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿಲ್ಲ




ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿಲ್ಲ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿಲ್ಲ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿಲ್ಲ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿಲ್ಲ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿಲ್ಲ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ



ಈ ಚಿತ್ರವು ಪ್ರತಿಫಲನದ ನಂತರ ಸದೃಶ್ಯವಾಗಿದೆ

# ಅಧ್ಯಾಯ – 14
# ಪ್ರಯೋಗಿಕ ರೇಖಾಗಣಿತ

## ಅಭ್ಯಾಸ 14.1

1. 3.2 cm ತ್ರಿಜ್ಯ ಇರುವ ವೃತ್ತವನ್ನು ಎಳೆಯಿರಿ.




2. ಒಂದೇ ಕೇಂದ್ರ O ಬಿಂದುವಿನಿಂದ 4 cm ಮತ್ತು 2.5 cm ತ್ರಿಜ್ಯಗಳಳಿರುವ ಎರಡು ವೃತ್ತಗಳನ್ನು ರಚಿಸಿ.




3. ಒಂದು ವೃತ್ತ ರಚಿಸಿ. ಅದರಲ್ಲಿ ಯಾವುದಾದರೂ 2 ವ್ಯಾಸಗಳನ್ನೆಲೆಯಿರಿ. ವ್ಯಾಸಗಳ ಅಂತ್ಯ (ಕೊನೆ) ಬಿಂದುಗಳನ್ನು ಸೇರಿಸಿದಾಗ ಉಂಟಾಗುವ ಆಕೃತಿ ಯಾವುದು? ಎರಡೂ ವ್ಯಾಸಗಳು ಪರಸ್ಪರ ಲಂಬವಾಗಿದ್ದಾಗ ಅವುಗಳ ಅಂತ್ಯ ಬಿಂದುಗಳನ್ನು ಸೇರಿಸಿದಾಗ ಯಾವ ಆಕೃತಿ ಉಂಟಾಗುತ್ತದೆ? ನಿಮ್ಮ ಉತ್ತರವನ್ನು ಹೇಗೆ ಪರೀಕ್ಷಿಸುವಿರಿ?



- ಇಲ್ಲಿ ವ್ಯಾಸಗಳ ಅಂತ್ಯ ಬಿಂದುಗಳನ್ನು ಸೇರಿಸಿದಾಗ, ಚತುರ್ಭುಜ ದೊರೆಯುತ್ತದೆ. ವ್ಯಾಸಗಳು ಪರಸ್ಪರ ಲಂಬವಾಗಿದ್ದಾಗ ಅವುಗಳ ಅಂತ್ಯ ಬಿಂದುಗಳನ್ನು ಸೇರಿಸಿದಾಗ ಚೌಕ ದೊರೆಯುತ್ತದೆ. ಅಳತೆ ಮಾಡುವುದರಿಂದ ಉತ್ತರವನ್ನು ಪರೀಕ್ಷಿಸುತ್ತೇವೆ.

4. ಒಂದು ವೃತ್ತ ರಚಿಸಿ. ನಂತರ A, B ಮತ್ತು C ಬಿಂದುಗಳನ್ನು ಕೆಳಗೆ ಕೊಟ್ಟಿರುವಂತೆ ಗುರುತಿಸಿ.

a) A ಬಿಂದುವು ವೃತ್ತದ ಮೇಲಿರುವಂತೆ




b) B ಯು ವೃತ್ತದೊಳಗೆ ಇರುವಂತೆ




c) C ಬಿಂದುವು ವೃತ್ತದ ಹೊರಗೆ ಇರುವಂತೆ



5. A ಮತ್ತು B ಎರಡು ಸಮಾನ ತ್ರಿಜ್ಯವುಳ್ಳ ಕೇಂದ್ರಗಳಾಗಿರಲಿ. ಒಂದು ವೃತ್ತವು ಇನ್ನೊಂದು ವೃತ್ತದ ಕೇಂದ್ರದ ಮೂಲಕ ಹಾದು ಹೋಗುವಂತೆ ರಚಿಸಿ. ಎರಡೂ ವೃತ್ತಗಳು C ಮತ್ತು D ಗಳಲ್ಲಿ ಪರಸ್ಪರ ಛೇದಿಸಲಿ. $\overline{AB}$ ಮತ್ತು $\overline{CD}$ ಪರಸ್ಪರ ಲಂಬವಾಗಿವೆಯೇ? (ಲಂಬ ಕೋನದಲ್ಲಿವೆಯೇ?) ಪರೀಕ್ಷಿಸಿ.




- $\overline{AB}$ ಮತ್ತು $\overline{CD}$ ಪರಸ್ಪರ ಲಂಬವಾಗಿವೆ.

## ಅಭ್ಯಾಸ 14.2

1. 7.3 cm ಉದ್ದವಿರುವ ಒಂದು ರೇಖಾಖಂಡವನ್ನು ಅಳತೆಪಟ್ಟಿಯ ಸಹಾಯದಿಂದ ಎಳೆಯಿರಿ.




2. 5.6 cm ಉದ್ದದ ರೇಖಾಖಂಡವನ್ನು ಅಳತೆ ಪಟ್ಟಿ ಮತ್ತು ಕೈವಾರ ಉಪಯೋಗಿಸಿ ರಚಿಸಿ.

**ಹಂತ 1 :** *l* ಎಂಬ ಒಂದು ರೇಖೆ ಎಳೆಯಿರಿ. ಇದರ ಮೇಲೆ A ಬಿಂದುವನ್ನು ಗುರುತಿಸಿ.




**ಹಂತ 2 :** ಒಂದು ಅಳತೆ ಪಟ್ಟಿಯ 0 ಗುರುತಿನ ಮೇಲೆ ಕೈವಾರದ ಸೂಚಿಯನ್ನಿಡಿ. ಅದರ ಪೆನ್ಸಿಲ್‌ನ ತುದಿಯನ್ನು 5.6 ಸೆಂ.ಮೀ ನ ಗುರುತಿನ ಮೇಲಿಡಿ.



**ಹಂತ 3 :** ನಂತರ ಕೈವಾರದ ಅಂತರವು ಬದಲಾವಣೆಯಾಗದಂತೆ ಎಚ್ಚರ ವಹಿಸಬೇಕು. ಕೈವಾರದ ಸೂಜಿ ತುದಿಯನ್ನು A ಬಿಂದುವಿನಲ್ಲಿಟ್ಟು ಒಂದು ಕಂಸವನ್ನು ಎಳೆಯಬೇಕು. ಕಂಸ ಮತ್ತು ರೇಖೆಯು ಛೇದಿಸಿದ ಬಿಂದು B ಆಗಿರಲಿ.




3. $\overline{AB}$ ಯ ಉದ್ದ 7.8 cm ಇರುವಂತೆ ಎಳೆದು ಇದರಲ್ಲಿ ಯ $\overline{AC}$ ಉದ್ದ 4.7 cm ಇರುವಂತೆ ಕತ್ತರಿಸಿ. $\overline{BC}$ ಯ ಉದ್ದವನ್ನು ಅಳೆಯಿರಿ.




BC = 7.8 – 4.7 = 3.1 cm

4. $\overline{AB}$ ಉದ್ದ 3.6 cm ಇದೆ. $\overline{PQ}$ ನ ಉದ್ದವು $\overline{AB}$ ಯ ಉದ್ದದ ಎರಡರಷ್ಟಿರುವಂತೆ $\overline{PQ}$ ವನ್ನು ರಚಿಸಿ. ಅಳತೆಯಿಂದ ತಾಳೆ ನೋಡಿ.




ಸುಳಿವು : $l$ ರೇಖೆ ಎಳೆದು $\overline{PX} = \overline{AB} = 3.9\ cm$ ಇರುವಂತೆ ಗುರುತಿಸಿ ನಂತರ X ನಿಂದ $\overline{XQ} = 3.9\ cm$ ಇರುವಂತೆ ಕತ್ತರಿಸಿ. ಆಗ

$\overline{PQ} = \overline{PX} + \overline{XQ} = 3.9 + 3.9 = 7.8\ cm$ ಆಗುವುದು.




$\overline{PQ} = \overline{PX} + \overline{XQ} = 3.9 + 3.9 = 7.8\ cm$

5. $\overline{AB}$ ಯ ಉದ್ದ 7.3 cm $\overline{CD}$ ಯ ಉದ್ದ 3.4 cm ಕೊಟ್ಟಿದೆ. XY ನ ಉದ್ದವು $\overline{AB}$ ಮತ್ತು $\overline{CD}$ ಗಳ ಉದ್ದಗಳ ವ್ಯತ್ಯಾಸದಷ್ಟಿರುವಂತೆ ರಚಿಸಿ. ಅಳತೆ ಮಾಡಿ ತಾಳೆ ನೋಡಿ.

AB = 7.3 cm, CD = 3.4 cm

XY = AB – CD

XY = 7.3 – 3.4

XY = 3.9 cm

**ಹಂತ 1:** ಕೊಟ್ಟ ಅಳತೆಯ AB = 7.3 cm, CD = 3.4 cm ರೇಖೆಗಳನ್ನು ಎಳೆಯಬೇಕು.




**ಹಂತ 2:** ಕೈವಾರದಿಂದ CD = 3.4 cm ಅಳತೆಯನ್ನು ತೆಗೆದುಕೊಂಡು AB ರೇಖೆಯ ಮೇಲೆ A ಬಿಂದುವಿನ ಮೇಲಿಟ್ಟು ಒಂದು ಕಂಸವನ್ನು ಎಳೆಯಬೇಕು.




**ಹಂತ 3:** ಇನ್ನೊಂದು ರೇಖೆ $l$ ಯನ್ನು ಎಳೆದು, ಅದರ ಮೇಲೆ X ಬಿಂದುವನ್ನು ಗುರುತಿಸಬೇಕು.




**ಹಂತ 4:** ಕೈವಾರದಿಂದ PB ಯ ಅಳತೆಯನ್ನು ತೆಗೆದುಕೊಂಡು X ಬಿಂದುವಿನಿಂದ $l$ ರೇಖೆಯ ಮೇಲೆ ಒಂದು ಕಂಸವನ್ನು ಗುರುತಿಸಬೇಕು. ಅದನ್ನು Y ಎಂದು ಗುರುತಿಸಿ.




**ಹಂತ 5:** XY ನಮಗೆ ಬೇಕಾದ ಅಳತೆಯ ರೇಖೆಯಾಗಿರುತ್ತದೆ.

# ಅಭ್ಯಾಸ 14.3

1. $\overline{PQ}$ ಎಂಬ ಯಾವುದೇ ರೇಖಾಖಂಡವನ್ನು ಎಳೆಯಿರಿ. ಇದರ ಉದ್ದವನ್ನು ಅಳೆಯದೆ $\overline{PQ}$ ಗೆ ಸಮವಾದ ಪ್ರತಿರೂಪ ರೇಖಾಖಂಡವನ್ನು ರಚಿಸಿ.

**ಹಂತ 1:** $\overline{PQ}$ ರೇಖಾಖಂಡವನ್ನು ಕೊಟ್ಟಿದೆ ಅದರ ಉದ್ದ ತಿಳಿದಿಲ್ಲ.




**ಹಂತ 2:** ಕೈವಾರದ ಸೂಚಕದ ತುದಿಯನ್ನು $P$ ಬಿಂದುವಿನಲ್ಲಿಟ್ಟು ಪೆನ್ಸಿಲ್ ತುದಿಯನ್ನು $Q$ ನಲ್ಲಿಡಿ. ಈ ಕೈವಾರದ ತೆರೆದ ಅಂತರವು $\overline{PQ}$ ನ ಉದ್ದವನ್ನು ಕೊಡುತ್ತದೆ.




**ಹಂತ 3:** ಯಾವುದೇ $l$ ರೇಖೆಯನ್ನೆಳೆಯಿರಿ. $l$ ನ ಮೇಲೆ $A$ ಬಿಂದುವನ್ನು ಗುರುತಿಸಿ. ಕೈವಾರದ ಅಳತೆಯನ್ನು ಬದಲಾಯಿಸದಂತೆ, ಅದರ ಸೂಚಕದ ತುದಿಯನ್ನು $B$ ನ ಮೇಲಿಡಿ.




**ಹಂತ 4:** ಕೈವಾರದ ಪೆನ್ಸಿಲ್ ತುದಿಯನ್ನು ಚಲಿಸಿ $l$ ರೇಖೆಯನ್ನು ಕತ್ತರಿಸುವಂತೆ $B$ ಬಿಂದುವಿನಲ್ಲಿ ಒಂದು ಕಂಸವನ್ನು ಎಳೆಯಿರಿ. ಈಗ $\overline{AB}$ ಯು $\overline{PQ}$ ನ ಪ್ರತಿರೂಪವಾಗಿರುತ್ತದೆ




2. ಉದ್ದ ಗೊತ್ತಿರದ $\overline{AB}$ ರೇಖಾಖಂಡವನ್ನು ನಿಮಗೆ ಕೊಟ್ಟಿದೆ. $\overline{AB}$ ಉ ಉದ್ದದ ಎರಡರಷ್ಟಿರುವಂತೆ $\overline{PQ}$ ರೇಖಾಖಂಡವನ್ನು ರಚಿಸಿ.

**ಹಂತ 1:** $\overline{AB}$ ರೇಖಾಖಂಡವನ್ನು ಕೊಟ್ಟಿದೆ ಅದರ ಉದ್ದ ತಿಳಿದಿಲ್ಲ.




**ಹಂತ 2:** ಕೈವಾರದ ಸೂಚಕದ ತುದಿಯನ್ನು $A$ ಬಿಂದುವಿನಲ್ಲಿಟ್ಟು ಪೆನ್ಸಿಲ್ ತುದಿಯನ್ನು $B$ ನಲ್ಲಿಡಿ. ಈ ಕೈವಾರದ ತೆರೆದ ಅಂತರವು $\overline{AB}$ ನ ಉದ್ದವನ್ನು ಕೊಡುತ್ತದೆ.




**ಹಂತ 3:** ಯಾವುದೇ $l$ ರೇಖೆಯನ್ನೆಳೆಯಿರಿ. $l$ ನ ಮೇಲೆ $P$ ಬಿಂದುವನ್ನು ಗುರುತಿಸಿ. ಕೈವಾರದ ಅಳತೆಯನ್ನು ಬದಲಾಯಿಸದಂತೆ, ಅದರ ಸೂಚಕದ ತುದಿಯನ್ನು ಎರಡು ಬಾರಿ ಅಳತೆ ಮಾಡಿ $Q$ ನ ಮೇಲಿಡಿ.




**ಹಂತ 4:** ಕೈವಾರದ ಪೆನ್ಸಿಲ್ ತುದಿಯನ್ನು ಚಲಿಸಿ $l$ ರೇಖೆಯನ್ನು ಕತ್ತರಿಸುವಂತೆ $Q$ ಬಿಂದುವಿನಲ್ಲಿ ಒಂದು ಕಂಸವನ್ನು ಎಳೆಯಿರಿ. ಈಗ $\overline{PQ}$ ಯು $\overline{AB}$ ಯ ಎರಡರಷ್ಟಿರುತ್ತದೆ.



# ಅಭ್ಯಾಸ 14.4

1. $\overline{AB}$ ರೇಖಾಖಂಡವನ್ನು ಎಳೆಯಿರಿ. ಅದರ ಮೇಲೆ ಯಾವುದೇ ಬಿಂದು M ಗುರುತಿಸಿ. M ನ ಮೂಲಕ $\overline{AB}$ ಗೆ ಲಂಬ ಎಳೆಯಿರಿ. (ಅಳತೆಪಟ್ಟಿ ಮತ್ತು ಕೈವಾರ ಬಳಸಿ)

**ಹಂತ 1:** $\overline{AB}$ ರೇಖಾಖಂಡದ ಮೇಲೆ ದತ್ತಬಿಂದು M ಆಗಿರಲಿ




**ಹಂತ 2:** M ಕೇಂದ್ರವಾಗಿಟ್ಟುಕೊಂಡು ಅನುಕೂಲಕರ ತ್ರಿಜ್ಯದಿಂದ $\overline{AB}$ ರೇಖಾಖಂಡವನ್ನು $A$ ಮತ್ತು $B$ ಗಳಲ್ಲಿ ಛೇದಿಸುವಂತೆ ಒಂದು ಕಂಸವನ್ನು ಎಳೆಯಿರಿ.




**ಹಂತ 3:** $A$ ಮತ್ತು $B$ ಕೇಂದ್ರವಾಗಿಟ್ಟುಕೊಂಡು, $\overline{AM}$ ಗಿಂತ ಹೆಚ್ಚು ತ್ರಿಜ್ಯದಿಂದ N ಬಿಂದುವಿನಲ್ಲಿ ಪರಸ್ಪರ ಕತ್ತರಿಸುವಂತೆ ಎರಡು ಕಂಸಗಳನ್ನು ಎಳೆಯಿರಿ.




**ಹಂತ 4:** M ಮತ್ತು N ಸೇರಿಸಿ, $\overline{MN}$ ರೇಖೆಯು $\overline{AB}$ ರೇಖಾಖಂಡಕ್ಕೆ ಲಂಬವಾಗಿರುತ್ತದೆ.




2. $\overline{PQ}$ ರೇಖಾಖಂಡವನ್ನು ಎಳೆಯಿರಿ. ಅದರ ಮೇಲೆ R ಎಂಬ ಒಂದು ಬಿಂದುವನ್ನು ಗುರುತಿಸಿ. R ನ ಮೂಲಕ $\overline{PQ}$ ಗೆ ಲಂಬ ಎಳೆಯಿರಿ. (ಅಳತೆಪಟ್ಟಿ ಮತ್ತು ಮೂಲೆ ಪಟ್ಟಿ ಬಳಸಿ)

**ಹಂತ 1:** $\overline{PQ}$ ರೇಖಾಖಂಡವನ್ನು ಎಳೆದು, ಅದರ ಮೇಲೆ R ಬಿಂದುವನ್ನು ಗುರುತಿಸಿ.




**ಹಂತ 2:** ಅಳತೆ ಪಟ್ಟಿಯ ಒಂದು ಅಂಚು $\overline{PQ}$ ರೇಖಾಖಂಡವನ್ನು ಹೊಂದಿಕೊಂಡಂತೆ ಇಡಿ. ಇದನ್ನು ಬಲವಾಗಿ ಒತ್ತಿ ಹಿಡಿದುಕೊಳ್ಳಿ.




**ಹಂತ 3:** ಒಂದು ಮೂಲೆ ಪಟ್ಟಿಯನ್ನು ಅಳತೆ ಪಟ್ಟಿಯ ಅಂಚಿನ ಮೇಲೆ ಪ್ರಸ್ಪರ ಲಂಬವಾಗಿರುವಂತೆ ಇಡಿ.




**ಹಂತ 4:** ನಂತರ ಮೂಲೆ ಪಟ್ಟಿಯನ್ನು ಅಳತೆ ಪಟ್ಟಿಯ ಮೇಲೆ ನಿಧಾನವಾಗಿ ಜಾರಿಸಿ, ಅದರ ಲಂಬಮೂಲೆಯು R ಬಿಂದುವಿನೊಂದಿಗೆ ಸಂಧಿಸುವುದನ್ನು ಗಮನಿಸಿ.




**ಹಂತ 5:** ಈ ಹಂತದಲ್ಲಿ ಮೂಲೆ ಪಟ್ಟಿಯನ್ನು ಬಲವಾಗಿ ಒತ್ತಿ ಹಿಡಿದುಕೊಳ್ಳಿ ನಂತರ ಮೂಲೆಪಟ್ಟಿಯ ಅಂಚಿನಲ್ಲಿ ರೇಖೆ RS ಎಳೆಯಿರಿ. RS ರೇಖೆಯು $\overline{PQ}$ ರೇಖಾಖಂಡಕ್ಕೆ ಲಂಬವಾಗಿರುತ್ತದೆ.



3. $l$ ರೇಖೆ ಎಳೆದು ಅದರ ಮೇಲೆ X ಬಿಂದುವನ್ನು ಗುರುತಿಸಿ. X ನ ಮೂಲಕ $\overline{XY}$ ರೇಖಾಖಂಡವು $l$ ಗೆ ಲಂಬವಾಗಿರುವಂತೆ ಎಳೆಯಿರಿ. (ಅಳತೆ ಪಟ್ಟಿ ಮತ್ತು ಕೈವಾರ ಬಳಸಿ)

**ಹಂತ 1:** ರೇಖೆ $l$ ಮೇಲೆ ದತ್ತಬಿಂದು X ಆಗಿರಲಿ




**ಹಂತ 2:** X ಕೇಂದ್ರವಾಗಿಟ್ಟುಕೊಂಡು ಅನುಕೂಲಕರ ತ್ರಿಜ್ಯದಿಂದ $l$ ರೇಖೆಯನ್ನು $A$ ಮತ್ತು $B$ ಗಳಲ್ಲಿ ಛೇದಿಸುವಂತೆ ಒಂದು ಕಂಸವನ್ನು ಎಳೆಯಿರಿ.




**ಹಂತ 3:** $A$ ಮತ್ತು $B$ ಕೇಂದ್ರವಾಗಿಟ್ಟುಕೊಂಡು, $\overline{AX}$ ಗಿಂತ ಹೆಚ್ಚು ತ್ರಿಜ್ಯದಿಂದ $Y$ ಬಿಂದುವಿನಲ್ಲಿ ಪರಸ್ಪರ ಕತ್ತರಿಸುವಂತೆ ಎರಡು ಕಂಸಗಳನ್ನು ಎಳೆಯಿರಿ




**ಹಂತ 4:** X ಮತ್ತು $Y$ ಸೇರಿಸಿ, $\overline{XY}$ ರೇಖೆಯು $l$ ರೇಖೆಗೆ ಲಂಬವಾಗಿರುತ್ತದೆ.




## ಅಭ್ಯಾಸ 14.5

1. $\overline{AB}$ ಯ ಉದ್ದ 7.3 cm ಇರುವಂತೆ ಎಳೆದು ಇದರ ಸಮಮಿತಿ ರೇಖೆಯನ್ನು ಕಂಡುಹಿಡಿಯಿರಿ.

**ಹಂತ 1:** $\overline{AB}$ = 7.3 cm ರೇಖಾಖಂಡವನ್ನು ಎಳೆಯಿರಿ.




**ಹಂತ 2:** $A$ ಬಿಂದುವನ್ನು ಕೇಂದ್ರವಾಗಿಸಿಕೊಂಡು $\overline{AB}$ ಯ ಅಳತೆಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯವಿರುವ ವೃತ್ತವನ್ನು ರಚಿಸಿ.




**ಹಂತ 3:** ಇದೇ ತ್ರಿಜ್ಯದಿಂದ $B$ ಕೇಂದ್ರವಾಗಿಟ್ಟುಕೊಂಡು ಇನ್ನೊಂದು ವೃತ್ತವನ್ನು ಕೈವಾರದಿಂದ ರಚಿಸಿ ಎರಡೂ ವೃತ್ತಗಳು ಪರಸ್ಪರ C ಮತ್ತು D ಬಿಂದುಗಳಲ್ಲಿ ಛೇದಿಸಲಿ.




**ಹಂತ 4:** CD ಸೇರಿಸಿ. CD ಯು $\overline{AB}$ ಯ ಸಮಮಿತಿ ರೇಖೆಯಾಗಿದೆ.



2. 9.5 cm ಉದ್ದವಿರುವ ರೇಖಾಖಂಡವನ್ನು ಎಳೆದು ಅದರ ಲಂಬಾರ್ಧಕವನ್ನು ರಚಿಸಿ.

**ಹಂತ 1:** $\overline{PQ}$ = 9.5 cm ರೇಖಾಖಂಡವನ್ನು ಎಳೆಯಿರಿ.




**ಹಂತ 2:** P ಬಿಂದುವನ್ನು ಕೇಂದ್ರವಾಗಿಸಿಕೊಂಡು $\overline{PQ}$ ಯ ಅಳತೆಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯವಿರುವ ವೃತ್ತವನ್ನು ರಚಿಸಿ.




**ಹಂತ 3:** ಇದೇ ತ್ರಿಜ್ಯದಿಂದ Q ಕೇಂದ್ರವಾಗಿಟ್ಟುಕೊಂಡು ಇನ್ನೊಂದು ವೃತ್ತವನ್ನು ಕೈವಾರದಿಂದ ರಚಿಸಿ ಎರಡೂ ವೃತ್ತಗಳು ಪರಸ್ಪರ R ಮತ್ತು S ಬಿಂದುಗಳಲ್ಲಿ ಛೇದಿಸಲಿ.




**ಹಂತ 4:** RS ಸೇರಿಸಿ. RS ಯು $\overline{PQ}$ ಯ ಲಂಬಾರ್ಧಕವಾಗಿದೆ.




3. $\overline{XY}$ ನ ಉದ್ದ 10.3 cm ಎಳೆದು ಅದರ ಲಂಬಾರ್ಧಕವನ್ನು ರಚಿಸಿ.

ಎ) ಲಂಬಾರ್ಧಕದ ಮೇಲೆ ಯಾವುದೇ P ಬಿಂದುವನ್ನು ಗುರುತಿಸಿ : PX = PY ಸಮವೇ? ಪರೀಕ್ಷಿಸಿ.

ಬಿ) M ಬಿಂದುವು XY ನ ಮಧ್ಯಬಿಂದುವಾದರೆ, $\overline{MX}$ ಮತ್ತು $\overline{MY}$ ಗಳ ಉದ್ದಗಳ ಬಗ್ಗೆ ನೀವೇನು ಹೇಳುವಿರಿ?

**ಹಂತ 1:** $\overline{XY}$ = 10.3 cm ರೇಖಾಖಂಡವನ್ನು ಎಳೆಯಿರಿ.




**ಹಂತ 2:** X ಬಿಂದುವನ್ನು ಕೇಂದ್ರವಾಗಿಸಿಕೊಂಡು $\overline{XY}$ ಯ ಅಳತೆಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯವಿರುವ ವೃತ್ತವನ್ನು ರಚಿಸಿ.




**ಹಂತ 3:** ಇದೇ ತ್ರಿಜ್ಯದಿಂದ Y ಕೇಂದ್ರವಾಗಿಟ್ಟುಕೊಂಡು ಇನ್ನೊಂದು ವೃತ್ತವನ್ನು ಕೈವಾರದಿಂದ ರಚಿಸಿ ಎರಡೂ ವೃತ್ತಗಳು ಪರಸ್ಪರ R ಮತ್ತು S ಬಿಂದುಗಳಲ್ಲಿ ಛೇದಿಸಲಿ.



**ಹಂತ 4:** RS ಸೇರಿಸಿ. RS ಯು $\overline{XY}$ ಯ ಲಂಬಾರ್ಧಕವಾಗಿದೆ.




ಎ) ಲಂಬಾರ್ಧಕದ ಮೇಲೆ ಯಾವುದೇ P ಬಿಂದುವನ್ನು ಗುರುತಿಸಿ : PX ಮತ್ತು PY ಅಳತೆ ಮಾಡಿದಾಗ ಅವು ಸಮವಾಗಿರುತ್ತದೆ.




ಬಿ) M ಬಿಂದುವು XY ನ ಮಧ್ಯಬಿಂದುವಾದರೆ, $\overline{MX}$ ಮತ್ತು $\overline{MY}$ ಗಳ ಉದ್ದಗಳು XY ನ ಅರ್ಧದಷ್ಟಿರುತ್ತವೆ. ಮತ್ತು ಅವೆರಡೂ ಸಮವಾಗಿರುತ್ತವೆ.




4. 12.8 cm ಉದ್ದವಿರುವ ರೇಖಾಖಂಡವನ್ನೆಳೆದು, ಅದನ್ನು ಕೈವಾರದ ಸಹಾಯದಿಂದ 4 ಸಮಭಾಗಗಳಾಗಿ ವಿಂಗಡಿಸಿ. ಅಳತೆ ಮಾಡಿ ತಾಳೆ ನೋಡಿ.

**ಹಂತ 1:** $\overline{XY}$ = 12.8 cm ರೇಖಾಖಂಡವನ್ನು ಎಳೆಯಿರಿ.




**ಹಂತ 2:** X ಬಿಂದುವನ್ನು ಕೇಂದ್ರವಾಗಿಸಿಕೊಂಡು $\overline{XY}$ ಯ ಅಳತೆಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯವಿರುವ ವೃತ್ತವನ್ನು ರಚಿಸಿ.




**ಹಂತ 3:** ಇದೇ ತ್ರಿಜ್ಯದಿಂದ Y ಕೇಂದ್ರವಾಗಿಟ್ಟುಕೊಂಡು ಇನ್ನೊಂದು ವೃತ್ತವನ್ನು ಕೈವಾರದಿಂದ ರಚಿಸಿ ಎರಡೂ ವೃತ್ತಗಳು ಪರಸ್ಪರ A ಮತ್ತು B ಬಿಂದುಗಳಲ್ಲಿ ಛೇದಿಸಲಿ. AB ಸೇರಿಸಿ. ಅದು $\overline{XY}$ ನ್ನು M ಬಿಂದುವಿನಲ್ಲಿ ಛೇದಿಸಲಿ.



**ಹಂತ 4:** X ಮತ್ತು Y ಗಳನ್ನು ಕೇಂದ್ರವಾಗಿಸಿಕೊಂಡು ಎರಡು ವೃತ್ತಗಳನ್ನು ಎಳೆಯಿರಿ. ಅವುಗಳ ತ್ರಿಜ್ಯಗಳು $\overline{XM}$ ನ ಉದ್ದದ ಅರ್ಧಕ್ಕಿಂತ ಹೆಚ್ಚಾಗಿರಲಿ.




**ಹಂತ 5:** ಅದೇ ತ್ರಿಜ್ಯದಿಂದ M ನ್ನು ಕೇಂದ್ರವಾಗಿಸಿಕೊಂಡು ಈಗ ಎಳೆದ ಎರಡೂ ವೃತ್ತಗಳನ್ನು P, Q ಮತ್ತು R, S ಗಳಲ್ಲಿ ಛೇದಿಸಲಿ




**ಹಂತ 6:** PQ ಮತ್ತು RS ಗಳನ್ನು ಸೇರಿಸಿ. ಅವು $\overline{XY}$ ನ್ನು T ಮತ್ತು U ಗಳಲ್ಲಿ ಕತ್ತರಿಸಲಿ.




**ಹಂತ 7:** $\overline{XY}$ ನ 4 ಸಮಭಾಗಗಳು $\overline{XT}, \overline{TM}, \overline{MU}, \overline{UY}$ ಇವುಗಳನ್ನು ಅಳತೆ ಪಟ್ಟಿಯಿಂದ ಅಳತೆ ಮಾಡಿದಾಗ ಅವುಗಳ ಅಳತೆಯು 3.2 ಆಗಿದೆ.

5. ವ್ಯಾಸ $\overline{PQ} = 6.1\ cm$ ಇರುವಂತೆ ಒಂದು ವೃತ್ತವನ್ನು ರಚಿಸಿ.

**ಹಂತ 1:** $\overline{PQ}$ = 6.1 cm ರೇಖಾಖಂಡವನ್ನು ಎಳೆಯಿರಿ.




**ಹಂತ 2:** P ಬಿಂದುವನ್ನು ಕೇಂದ್ರವಾಗಿಸಿಕೊಂಡು $\overline{PQ}$ ಯ ಅಳತೆಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯವಿರುವ ವೃತ್ತವನ್ನು ರಚಿಸಿ.




**ಹಂತ 3:** ಇದೇ ತ್ರಿಜ್ಯದಿಂದ Q ಕೇಂದ್ರವಾಗಿಟ್ಟುಕೊಂಡು ಇನ್ನೊಂದು ವೃತ್ತವನ್ನು ಕೈವಾರದಿಂದ ರಚಿಸಿ ಎರಡೂ ವೃತ್ತಗಳು ಪರಸ್ಪರ R ಮತ್ತು S ಬಿಂದುಗಳಲ್ಲಿ ಛೇದಿಸಲಿ.




**ಹಂತ 4:** RS ಸೇರಿಸಿ. RS ಯು $\overline{PQ}$ ಅನ್ನು O ಬಿಂದುವಿನಲ್ಲಿ ಛೇದಿಸಲಿ.



**ಹಂತ 5:** O ನ್ನು ಕೇಂದ್ರವಾಗಿಸಿ. PO ತ್ರಿಜ್ಯವನ್ನಾಗಿ ಮಾಡಿ, P ಮತ್ತು Q ಬಿಂದುಗಳ ಮೂಲಕ ಹಾದುಹೋಗುವಂತೆ ವೃತ್ತವನ್ನು ಎಳೆಯಿರಿ. ಈ ವೃತ್ತವೇ ನಮಗೆ ಬೇಕಾದ ವೃತ್ತವಾಗಿದೆ.




6. C ಕೇಂದ್ರವಾಗಿಟ್ಟುಕೊಂಡು 3.4 cm ತ್ರಿಜ್ಯವಿರುವ ಒಂದು ವೃತ್ತವನ್ನು ರಚಿಸಿ; ಅದರಲ್ಲಿ ಜ್ಯಾ $\overline{AB}$ ಗುರುತಿಸಿ. $\overline{AB}$ ಗೆ ಲಂಬಾರ್ಧಕವನ್ನು ರಚಿಸಿ. $\overline{AB}$ ಯ ಲಂಬಾರ್ಧಕವು C ಬಿಂದುವಿನ ಮೂಲಕ ಹಾದು ಹೋಗುತ್ತದೆಯೇ? ಪರೀಕ್ಷಿಸಿ.

**ಹಂತ 1:** C ಕೇಂದ್ರವಾಗಿಟ್ಟುಕೊಂಡು 3.4 cm ತ್ರಿಜ್ಯವಿರುವ ಒಂದು ವೃತ್ತವನ್ನು ರಚಿಸಿ.




**ಹಂತ 2:** ವೃತ್ತದಲ್ಲಿ ಯಾವುದೇ ಜ್ಯಾ $\overline{AB}$ ಗುರುತಿಸಿ.




**ಹಂತ 3:** A ಮತ್ತು B ಗಳನ್ನು ಕೇಂದ್ರವಾಗಿಸಿಕೊಂಡು $\overline{AB}$ ಯ ಎರಡೂ ಬದಿಗಳಲ್ಲಿ ಕಂಸಗಳನ್ನು ಎಳೆಯಿರಿ. ಈ ಕಂಸಗಳು D ಮತ್ತು E ಗಳಲ್ಲಿ ಪರಸ್ಪರ ಛೇದಿಸುವಂತಿರಲಿ




**ಹಂತ 4:** D ಮತ್ತು E ಗಳನ್ನು ಸೇರಿಸಿ. DE ಯು $\overline{AB}$ ಯ ಲಂಬಾರ್ಧಕವಾಗಿದೆ. DE ಯನ್ನು ವೃದ್ಧಿಸಿದಾಗ ಅದು C ಯ ಮೂಲಕ ಹಾದು ಹೋಗುತ್ತದೆ.




7. ಈ ಮೇಲಿನ ಪ್ರಶ್ನೆಯಲ್ಲಿ $\overline{AB}$ ಯನ್ನು ವ್ಯಾಸವಾಗಿ ತೆಗೆದುಕೊಂಡು ರಚನೆ ಮಾಡಿ.

**ಹಂತ 1:** C ಕೇಂದ್ರವಾಗಿಟ್ಟುಕೊಂಡು 3.4 cm ತ್ರಿಜ್ಯವಿರುವ ಒಂದು ವೃತ್ತವನ್ನು ರಚಿಸಿ.



**ಹಂತ 2:** ವೃತ್ತದಲ್ಲಿ ಯಾವುದೇ ವ್ಯಾಸ $\overline{AB}$ ಗುರುತಿಸಿ.




**ಹಂತ 3:** A ಮತ್ತು B ಗಳನ್ನು ಕೇಂದ್ರವಾಗಿಸಿಕೊಂಡು $\overline{AB}$ ಯ ಎರಡೂ ಬದಿಗಳಲ್ಲಿ ಕಂಸಗಳನ್ನು ಎಳೆಯಿರಿ. ಈ ಕಂಸಗಳು D ಮತ್ತು E ಗಳಲ್ಲಿ ಪರಸ್ಪರ ಛೇದಿಸುವಂತಿರಲಿ




**ಹಂತ 4:** D ಮತ್ತು E ಗಳನ್ನು ಸೇರಿಸಿ. DE ಯು $\overline{AB}$ ಯ ಲಂಬಾರ್ಧಕವಾಗಿದೆ. DE ಯು C ಯ ಮೂಲಕ ಹಾದು ಹೋಗುತ್ತದೆ




8. 4 ಸೆಂ.ಮೀ ತ್ರಿಜ್ಯವಿರುವ ಒಂದು ವೃತ್ತವನ್ನು ಎಳೆಯಿರಿ. ಅದರಲ್ಲಿ ಯಾವುದಾದರೂ ಎರಡು ಜ್ಯಾಗಳನ್ನು ಎಳೆಯಿರಿ. ಈ ಜ್ಯಾಗಳಿಗೆ ಲಂಬಾರ್ಧಕಗಳನ್ನು ರಚಿಸಿ. ಅವು ಎಲ್ಲಿ ಸಂಧಿಸುತ್ತವೆ?

**ಹಂತ 1:** O ಕೇಂದ್ರವಾಗಿಟ್ಟುಕೊಂಡು 4 cm ತ್ರಿಜ್ಯವಿರುವ ಒಂದು ವೃತ್ತವನ್ನು ರಚಿಸಿ




**ಹಂತ 2:** ವೃತ್ತದಲ್ಲಿ ಯಾವುದೇ ಎರಡು ಜ್ಯಾಗಳು $\overline{AB}$ ಮತ್ತು $\overline{CD}$ ಗಳನ್ನು ಗುರುತಿಸಿ




**ಹಂತ 3:** A ಮತ್ತು B ಗಳನ್ನು ಕೇಂದ್ರವಾಗಿಸಿಕೊಂಡು $\overline{AB}$ ಯ ಎರಡೂ ಬದಿಗಳಲ್ಲಿ ಕಂಸಗಳನ್ನು ಎಳೆಯಿರಿ. ಈ ಕಂಸಗಳು E ಮತ್ತು F ಗಳಲ್ಲಿ ಪರಸ್ಪರ ಛೇದಿಸುವಂತಿರಲಿ. EF ನ್ನು ಸೇರಿಸಿ, ಇದು $\overline{AB}$ ಗೆ ಲಂಬಾರ್ಧಕವಾಗಿರುತ್ತದೆ.



**ಹಂತ 4:** C ಮತ್ತು D ಗಳನ್ನು ಕೇಂದ್ರವಾಗಿಸಿಕೊಂಡು $\overline{CD}$ ಯ ಎರಡೂ ಬದಿಗಳಲ್ಲಿ ಕಂಸಗಳನ್ನು ಎಳೆಯಿರಿ. ಈ ಕಂಸಗಳು G ಮತ್ತು H ಗಳಲ್ಲಿ ಪರಸ್ಪರ ಛೇದಿಸುವಂತಿರಲಿ. GH ನ್ನು ಸೇರಿಸಿ, ಇದು $\overline{CD}$ ಗೆ ಲಂಬಾರ್ಧಕವಾಗಿರುತ್ತದೆ.




ಈ ಎರಡೂ ಲಂಬಾರ್ಧಕಗಳು ವೃತ್ತದ ಕೇಂದ್ರದಲ್ಲಿ ಸಂಧಿಸುತ್ತವೆ.

9. O ಶೃಂಗವಿರುವಂತೆ ಯಾವುದಾದರೂ ಒಂದು ಕೋನ ರಚಿಸಿ. ಅವುಗಳ ಬಾಹುಗಳ ಮೇಲೆ A ಮತ್ತು B ಬಿಂದುಗಳನ್ನು ಕ್ರಮವಾಗಿ OA = OB ಆಗಿರುವಂತೆ ಗುರುತಿಸಿ. $\overline{OA}$ ಮತ್ತು $\overline{OB}$ ಗಳಿಗೆ ಲಂಬಾರ್ಧಕಗಳನ್ನು ಎಳೆಯಿರಿ. ಅವು P ಯಲ್ಲಿ ಸಂಧಿಸಲಿ. $\overline{PA} = \overline{PB}$ ಆಗಿದೆಯೇ? ಪರೀಕ್ಷಿಸಿ.

**ಹಂತ 1:** O ಶೃಂಗವಿರುವಂತೆ ಯಾವುದೇ ಕೋನವನ್ನು ರಚಿಸಿ.




**ಹಂತ 2:** O ನ್ನು ಕೇಂದ್ರವಾಗಿಸಿಕೊಂಡು ಅಗತ್ಯವಿರುವ ತ್ರಿಜ್ಯದೊಂದಿಗೆ ಕೈವಾರದ ಸಹಾಯದಿಂದ ಕೋನದ ಎರಡು ಕಿರಣಗಳ ಮೇಲೆ ಕಂಸಗಳನ್ನು ಎಳೆಯಿರಿ. ಆರಡು ಕಂಸಗಳು A ಮತ್ತು B ಗಳಲ್ಲಿ ಛೇದಿಸಲಿ.




**ಹಂತ 3:** O ಮತ್ತು A ಗಳನ್ನು ಕೇಂದ್ರವಾಗಿಸಿಕೊಂಡು, OA ದ ಅರ್ದಕ್ಕಿಂತ ಹೆಚ್ಚು ತ್ರಿಜ್ಯವನ್ನಿಟ್ಟುಕೊಂಡು OA ದ ಎರಡೂ ಬದಿಗಳಲ್ಲಿ ಕಂಸಗಳನ್ನು ಎಳೆಯಿರಿ. ಕಂಸಗಳು ಪರಸ್ಪರ C ಮತ್ತು D ಬಿಂದುಗಳಲ್ಲಿ ಛೇದಿಸಲಿ. CD ಯನ್ನು ಸೇರಿಸಿ.




**ಹಂತ 4:** ಅದೇ ರೀತಿ OB ಗೆ EF ಲಂಬಾರ್ಧಕವನ್ನು ರಚಿಸಿ. CD ಮತ್ತು EF ಲಂಬಾರ್ಧಕಗಳು P ಬಿಂದುವಿನಲ್ಲಿ ಸಂಧಿಸಲಿ. PA ಮತ್ತು PB ಗಳನ್ನು ಅಳತೆ ಮಾಡಿದಾಗ, ಅವುಗಳ ಅಳತೆಗಳು ಸಮವಾಗಿರುತ್ತವೆ.



# ಅಭ್ಯಾಸ 14.6

1. $\angle PQR = 75^\circ$ ಇರುವಂತೆ ಕೋನ ರಚಿಸಿ ಅದರ ಸಮಮಿತಿ ರೇಖೆಯನ್ನು ಕಂಡುಹಿಡಿಯಿರಿ.

**ಹಂತ 1:** $\overline{QR}$ ರೇಖಾಖಂಡವನ್ನು ಎಳೆಯಿರಿ.




**ಹಂತ 2:** ಕೋನಮಾಪಕದ ಸಹಾಯದಿಂದ Q ಬಿಂದುವಿನಲ್ಲಿ $\angle PQR = 75^\circ$ ಕೋನವನ್ನು ರಚಿಸಿ.




**ಹಂತ 3:** Q ಯನ್ನು ಕೇಂದ್ರವಾಗಿಸಿಕೊಂಡು ಕೈವಾರ ಬಳಸಿ ∠Q ನ ಎರಡೂ ಕಿರಣಗಳನ್ನು ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ. ಹೀಗೆ ಕತ್ತರಿಸಿದ ಬಿಂದುಗಳು A ಮತ್ತು B ಆಗಿರಲಿ.




**ಹಂತ 4:** A ಯನ್ನು ಕೇಂದ್ರವಾಗಿಟ್ಟುಕೊಂಡು AB ಉದ್ದದ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ, ∠Q ನ ಒಳಭಾಗದಲ್ಲಿ ಒಂದು ಕಂಸವನ್ನು ಎಳೆಯಿರಿ.




**ಹಂತ 5:** ತ್ರಿಜ್ಯವನ್ನು ಬದಲಾಯಿಸದೆ B ಕೇಂದ್ರದಿಂದ ಹಿಂದಿನ ಕಂಸವನ್ನು C ಬಿಂದುವಿನಲ್ಲಿ ಕತ್ತರಿಸುವಂತೆ ಇನ್ನೊಂದು ಕಂಸವನ್ನು ಎಳೆಯಿರಿ. ಎರಡೂ ಕಂಸಗಳು C ಬಿಂದುವಿನಲ್ಲಿ ಕತ್ತರಿಸಲಿ. QC ಸೇರಿಸಿ. QC ಯು ∠Q ನ ಸಮಮಿತಿ ರೇಖೆಯಾಗಿದೆ.




2. $147^\circ$ ಅಳತೆಯುಳ್ಳ ಕೋನವನ್ನು ರಚಿಸಿ ಅದರ ಕೋನಾರ್ಧಕವನ್ನು ಎಳೆಯಿರಿ.

**ಹಂತ 1:** $l$ ರೇಖೆಯನ್ನು ಎಳೆಯಿರಿ.

**ಹಂತ 2:** ಕೋನಮಾಪಕದ ಸಹಾಯದಿಂದ ಬಿಂದುವಿನಲ್ಲಿ $\angle O = 147^\circ$ ಕೋನವನ್ನು ರಚಿಸಿ.

**ಹಂತ 3:** ಯನ್ನು ಕೇಂದ್ರವಾಗಿಸಿಕೊಂಡು ಕೈವಾರ ಬಳಸಿ ∠O ನ ಎರಡೂ ಕಿರಣಗಳನ್ನು ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ. ಹೀಗೆ ಕತ್ತರಿಸಿದ ಬಿಂದುಗಳು A ಮತ್ತು B ಆಗಿರಲಿ.

**ಹಂತ 4:** A ಯನ್ನು ಕೇಂದ್ರವಾಗಿಟ್ಟುಕೊಂಡು AB ಉದ್ದದ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ, ∠O ನ ಒಳಭಾಗದಲ್ಲಿ ಒಂದು ಕಂಸವನ್ನು ಎಳೆಯಿರಿ.

**ಹಂತ 5:** ತ್ರಿಜ್ಯವನ್ನು ಬದಲಾಯಿಸದೆ B ಕೇಂದ್ರದಿಂದ ಹಿಂದಿನ ಕಂಸವನ್ನು C ಬಿಂದುವಿನಲ್ಲಿ ಕತ್ತರಿಸುವಂತೆ ಇನ್ನೊಂದು ಕಂಸವನ್ನು ಎಳೆಯಿರಿ. ಎರಡೂ ಕಂಸಗಳು C ಬಿಂದುವಿನಲ್ಲಿ ಕತ್ತರಿಸಲಿ. OC ಸೇರಿಸಿ. OC ಯು ∠O ನ ಕೋನಾರ್ಧಕ ರೇಖೆಯಾಗಿದೆ.



3. ಒಂದು ಲಂಬಕೋನವನ್ನು ರಚಿಸಿ ಅದರ ಕೋನಾರ್ಧಕವನ್ನು ಎಳೆಯಿರಿ.

**ಹಂತ 1:** $l$ ರೇಖೆಯನ್ನು ಎಳೆಯಿರಿ.

**ಹಂತ 2:** ಕೋನಮಾಪಕದ ಸಹಾಯದಿಂದ ಬಿಂದುವಿನಲ್ಲಿ $\angle O = 90°$ ಕೋನವನ್ನು ರಚಿಸಿ.

**ಹಂತ 3:** ಯನ್ನು ಕೇಂದ್ರವಾಗಿಸಿಕೊಂಡು ಕೈವಾರ ಬಳಸಿ $\angle O$ ನ ಎರಡೂ ಕಿರಣಗಳನ್ನು ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ. ಹೀಗೆ ಕತ್ತರಿಸಿದ ಬಿಂದುಗಳು A ಮತ್ತು B ಆಗಿರಲಿ.

**ಹಂತ 4:** A ಯನ್ನು ಕೇಂದ್ರವಾಗಿಟ್ಟುಕೊಂಡು AB ಉದ್ದದ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ, $\angle O$ ನ ಒಳಭಾಗದಲ್ಲಿ ಒಂದು ಕಂಸವನ್ನು ಎಳೆಯಿರಿ.

**ಹಂತ 5:** ತ್ರಿಜ್ಯವನ್ನು ಬದಲಾಯಿಸದೆ B ಕೇಂದ್ರದಿಂದ ಹಿಂದಿನ ಕಂಸವನ್ನು C ಬಿಂದುವಿನಲ್ಲಿ ಕತ್ತರಿಸುವಂತೆ ಇನ್ನೊಂದು ಕಂಸವನ್ನು ಎಳೆಯಿರಿ. ಎರಡೂ ಕಂಸಗಳು C ಬಿಂದುವಿನಲ್ಲಿ ಕತ್ತರಿಸಲಿ. OC ಸೇರಿಸಿ. OC ಯು $\angle O$ ನ ಕೋನಾರ್ಧಕ ರೇಖೆಯಾಗಿದೆ.




4. 153° ಕೋನವನ್ನು ರಚಿಸಿ ಅದನ್ನು 4 ಸಮಭಾಗಗಳಾಗಿ ವಿಭಾಗಿಸಿ.

**ಹಂತ 1:** $l$ ರೇಖೆಯನ್ನು ಎಳೆಯಿರಿ.

**ಹಂತ 2:** ಕೋನಮಾಪಕದ ಸಹಾಯದಿಂದ ಬಿಂದುವಿನಲ್ಲಿ $\angle O = 153°$ ಕೋನವನ್ನು ರಚಿಸಿ.

**ಹಂತ 3:** ಕೈವಾರದ ಸಹಾಯದಿಂದ ಅಗತ್ಯವಾದಷ್ಟು ತ್ರಿಜ್ಯದಿಂದ O ಕೇಂದ್ರವಾಗಿಟ್ಟುಕೊಂಡು ಕಂಸವನ್ನು ಎಳೆಯಿರಿ. ಈ ಕಂಸವು ಎರಡು ಕಿರಣಗಳನ್ನು A ಮತ್ತು B ಬಿಂದುಗಳಲ್ಲಿ ಛೇದಿಸಲಿ.

**ಹಂತ 4:** A ಮತ್ತು B ಗಳನ್ನು ಕೇಂದ್ರವಾಗಿಟ್ಟುಕೊಂಡು AB ಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದೊಂದಿಗೆ ಕೋನದ ಒಳಭಾಗದಲ್ಲಿ ಎರಡು ಕಂಸಗಳನ್ನು ಎಳೆಯಿರಿ. ಎರಡೂ ಕಂಸಗಳು C ಬಿಂದುವಿನಲ್ಲಿ ಛೇದಿಸಲಿ.

**ಹಂತ 5:** OC ಯು AB ಕಂಸವನ್ನು D ನಲ್ಲಿ ಛೇದಿಸಲಿ. A, D, D, B ಗಳನ್ನು ಕೇಂದ್ರವಾಗಿಟ್ಟುಕೊಂಡು AD ಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಈ ಕಂಸಗಳು ಕ್ರಮವಾಗಿ E, F ಗಳಲ್ಲಿ ಛೇದಿಸಲಿ. OE ಮತ್ತು OF ಗಳನ್ನು ಸೇರಿಸಿ.

OF, OC ಮತ್ತು OE ಗಳು 153 °ಕೋನವನ್ನು ನಾಲ್ಕು ಸಮಭಾಗಗಳಾಗಿ ಮಾಡುತ್ತವೆ.




5. ಈ ಕೆಳಗಿನ ಅಳತೆಗಳ ಕೋನವನ್ನು ಅಳತೆಪಟ್ಟಿ ಮತ್ತು ಕೈವಾರದ ಸಹಾಯದಿಂದ ರಚಿಸಿ.

a) 60°

**ಹಂತಗಳು :**

1) ಒಂದು ರೇಖೆ $l$ ನ್ನು ಎಳೆದು, ಅದರ ಮೇಲೆ P ಬಿಂದುವನ್ನು ಗುರುತಿಸಿ. P ಯನ್ನು ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು Q ಬಿಂದುವಿನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.

2) ತ್ರಿಜ್ಯವನ್ನು ಬದಲಿಸದೆ ಕೈವಾರವನ್ನು Q ಬಿಂದುವನಲ್ಲಿಟ್ಟು ಹಿಂದಿನ ಕಂಸವನ್ನು R ನಲ್ಲಿ ಕತ್ತರಿಸಿ.

3) PR ಸೇರಿಸಿ, RPQ ಇದು ನಮಗೆ ಬೇಕಾದ 60° ಕೋನವಾಗಿದೆ.




b) 30°

**ಹಂತಗಳು :**

1) ಒಂದು ರೇಖೆ $l$ ನ್ನು ಎಳೆದು, ಅದರ ಮೇಲೆ P ಬಿಂದುವನ್ನು ಗುರುತಿಸಿ. P ಯನ್ನು ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು Q ಬಿಂದುವಿನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.

2) ತ್ರಿಜ್ಯವನ್ನು ಬದಲಿಸದೆ ಕೈವಾರವನ್ನು Q ಬಿಂದುವನಲ್ಲಿಟ್ಟು ಹಿಂದಿನ ಕಂಸವನ್ನು R ನಲ್ಲಿ ಕತ್ತರಿಸಿ.

3) Q ಮತ್ತು R ಗಳನ್ನು ಕೇಂದ್ರವಾಗಿಟ್ಟುಕೊಂಡು RQ ನ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಆ ಕಂಸಗಳು S ಬಿಂದುವಿನಲ್ಲಿ ಛೇದಿಸಲಿ

4) PS ಸೇರಿಸಿ, SPQ ಇದು ನಮಗೆ ಬೇಕಾದ 30° ಕೋನವಾಗಿದೆ.




c) 90°

**ಹಂತಗಳು :**

1) ಒಂದು ರೇಖೆ $l$ ನ್ನು ಎಳೆದು, ಅದರ ಮೇಲೆ P ಬಿಂದುವನ್ನು ಗುರುತಿಸಿ. P ಯನ್ನು ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು Q ಬಿಂದುವಿನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.

2) ತ್ರಿಜ್ಯವನ್ನು ಬದಲಿಸದೆ ಕೈವಾರವನ್ನು Q ಬಿಂದುವನಲ್ಲಿಟ್ಟು ಹಿಂದಿನ ಕಂಸವನ್ನು R ನಲ್ಲಿ ಕತ್ತರಿಸಿ.

3) R ನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸವನ್ನು ಎಳೆಯಿರಿ. ಆ ಕಂಸವು S ಬಿಂದುವಿನಲ್ಲಿ ಛೇದಿಸಲಿ

4) R ಮತ್ತು S ಗಳನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಆ ಕಂಸಗಳು T ಬಿಂದುವಿನಲ್ಲಿ ಛೇದಿಸಲಿ. PT ಸೇರಿಸಿ. TPQ ಇದು ನಮಗೆ ಬೇಕಾದ 90° ಕೋನವಾಗಿದೆ.




d) 120°

**ಹಂತಗಳು :**

1) ಒಂದು ರೇಖೆ $l$ ನ್ನು ಎಳೆದು, ಅದರ ಮೇಲೆ P ಬಿಂದುವನ್ನು ಗುರುತಿಸಿ. P ಯನ್ನು ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು Q ಬಿಂದುವಿನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.

2) ತ್ರಿಜ್ಯವನ್ನು ಬದಲಿಸದೆ ಕೈವಾರವನ್ನು Q ಬಿಂದುವನಲ್ಲಿಟ್ಟು ಹಿಂದಿನ ಕಂಸವನ್ನು R ನಲ್ಲಿ ಕತ್ತರಿಸಿ.

3) R ನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸವನ್ನು ಎಳೆಯಿರಿ. ಆ ಕಂಸವು S ಬಿಂದುವಿನಲ್ಲಿ ಛೇದಿಸಲಿ

4) PS ಸೇರಿಸಿ. SPQ ಇದು ನಮಗೆ ಬೇಕಾದ 120° ಕೋನವಾಗಿದೆ




e) 45°

**ಹಂತಗಳು :**

1) ಒಂದು ರೇಖೆ $l$ ನ್ನು ಎಳೆದು, ಅದರ ಮೇಲೆ P ಬಿಂದುವನ್ನು ಗುರುತಿಸಿ. P ಯನ್ನು ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು Q ಬಿಂದುವಿನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.

2) ತ್ರಿಜ್ಯವನ್ನು ಬದಲಿಸದೆ ಕೈವಾರವನ್ನು Q ಬಿಂದುವನಲ್ಲಿಟ್ಟು ಹಿಂದಿನ ಕಂಸವನ್ನು R ನಲ್ಲಿ ಕತ್ತರಿಸಿ.

3) R ನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸವನ್ನು ಎಳೆಯಿರಿ. ಆ ಕಂಸವು S ಬಿಂದುವಿನಲ್ಲಿ ಛೇದಿಸಲಿ

4) R ಮತ್ತು S ಗಳನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಆ ಕಂಸಗಳು T ಬಿಂದುವಿನಲ್ಲಿ ಛೇದಿಸಲಿ. PT ಸೇರಿಸಿ. PT ಯು ಮೂಲ ಕಂಸವನ್ನು U ನಲ್ಲಿ ಛೇದಿಸಲಿ.

5) Q ಮತ್ತು U ಗಳನ್ನು ಕೇಂದ್ರವಾಗಿಟ್ಟುಕೊಂಡು QU ನ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಆ ಕಂಸಗಳು V ಬಿಂದುವಿನಲ್ಲಿ ಛೇದಿಸಲಿ. PV ಸೇರಿಸಿ. VPQ ಇದು ನಮಗೆ ಬೇಕಾದ 45° ಕೋನವಾಗಿದೆ.




f) 135°

**ಹಂತಗಳು :**

1) ಒಂದು ರೇಖೆ $l$ ನ್ನು ಎಳೆದು, ಅದರ ಮೇಲೆ P ಬಿಂದುವನ್ನು ಗುರುತಿಸಿ. P ಯನ್ನು ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು R ಬಿಂದುವಿನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.

2) R ನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸವನ್ನು ಎಳೆಯಿರಿ. ಆ ಕಂಸವು S ಬಿಂದುವಿನಲ್ಲಿ ಛೇದಿಸಲಿ

3) S ನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ಕಂಸ ಎಳೆಯಿರಿ. ಆ ಕಂಸ T ಬಿಂದುವಿನಲ್ಲಿ ಛೇದಿಸಲಿ.

4) S ಮತ್ತು T ಗಳನ್ನು ಕೇಂದ್ರವಾಗಿಟ್ಟುಕೊಂಡು ಅದೇ ತ್ರಿಜ್ಯದಿಂದ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಆ ಕಂಸಗಳು U ಬಿಂದುವಿನಲ್ಲಿ ಛೇದಿಸಲಿ.

5) PU ಸೇರಿಸಿ. PU ಮೂಲ ಕಂಸವನ್ನು ನಲ್ಲಿ ಛೇದಿಸಲಿ.

6) Q ಮತ್ತು V ಗಳನ್ನು ಕೇಂದ್ರವಾಗಿಟ್ಟುಕೊಂಡು QV ನ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಆ ಕಂಸಗಳು W ಬಿಂದುವಿನಲ್ಲಿ ಛೇದಿಸಲಿ. PW ಸೇರಿಸಿ. WPQ ಇದು ನಮಗೆ ಬೇಕಾದ 135° ಕೋನವಾಗಿದೆ.




6. 45° ಕೋನವನ್ನು ರಚಿಸಿ ಅರ್ಧಿಸಿ.

**ಹಂತಗಳು :**

1) ಕೋನಮಾಪಕದ ಸಹಾಯದಿಂದ ರೇಖೆಯ ಮೇಲೆ O ಬಿಂದುವಿನಲ್ಲಿ 45° ಕೋನವನ್ನು ರಚಿಸಿ.

2) O ಕೇಂದ್ರವಾಗಿಟ್ಟುಕೊಂಡು ಕೈವಾರ ಬಳಸಿ ಎರಡೂ ಕಿರಣಗಳನ್ನು ಕತ್ತರಿಸುವಂತೆ ಒಂದು ಕಂಸವನ್ನ ಎಳೆಯಿರಿ. ಹೀಗೆ ಕತ್ತರಿಸಿದ ಬಿಂದುಗಳು A ಮತ್ತು B ಆಗಿರಲಿ.

3) A ಮತ್ತು B ಗಳನ್ನು ಕೇಂದ್ರವಾಗಿಟ್ಟುಕೊಂಡು AB ಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಈ ಕಂಸಗಳು C ಬಿಂದುವಿನಲ್ಲಿ ಛೇದಿಸಲಿ. OC ಸೇರಿಸಿ. OC ಇದು 45° ಕೋನದ ಕೋನಾರ್ಧಕವಾಗಿದೆ.




7.

135° ಕೋನವನ್ನು ರಚಿಸಿ ಅರ್ಧಿಸಿ.

**ಹಂತಗಳು :**

1) ಕೋನಮಾಪಕದ ಸಹಾಯದಿಂದ ರೇಖೆಯ ಮೇಲೆ O ಬಿಂದುವಿನಲ್ಲಿ 135° ಕೋನವನ್ನು ರಚಿಸಿ.

2) O ಕೇಂದ್ರವಾಗಿಟ್ಟುಕೊಂಡು ಕೈವಾರ ಬಳಸಿ ಎರಡೂ ಕಿರಣಗಳನ್ನು ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ. ಹೀಗೆ ಕತ್ತರಿಸಿದ ಬಿಂದುಗಳು A ಮತ್ತು B ಆಗಿರಲಿ.

3) A ಮತ್ತು B ಗಳನ್ನು ಕೇಂದ್ರವಾಗಿಟ್ಟುಕೊಂಡು AB ಯ ಅರ್ಧಕ್ಕಿಂತ ಹೆಚ್ಚಿನ ತ್ರಿಜ್ಯದಿಂದ ಕಂಸಗಳನ್ನು ಎಳೆಯಿರಿ. ಈ ಕಂಸಗಳು C ಬಿಂದುವಿನಲ್ಲಿ ಛೇದಿಸಲಿ. OC ಸೇರಿಸಿ. OC ಇದು 135° ಕೋನದ ಕೋನಾರ್ಧಕವಾಗಿದೆ.




8. 70° ಕೋನವನ್ನು ಗುರುತಿಸಿ. ಇದಕ್ಕೆ ಸಮನಾದ ಇನ್ನೊಂದು ಕೋನವನ್ನು ಅಳತೆ ಪಟ್ಟಿ ಮತ್ತು ಕೈವಾರದಿಂದ ರಚಿಸಿ.

**ಹಂತಗಳು :**

1) ದತ್ತ ಅಳತೆಯ 70° ಕೋನವನ್ನು ಕೋನಮಾಪಕದ ಸಹಾಯದಿಂದ ರಚಿಸಿ.




2) $l$ ರೇಖೆಯನ್ನು ಎಳೆದು ಒಂದು ಬಿಂದು P ಯನ್ನು ಅದರ ಮೇಲೆ ಗುರುತಿಸಿ.




3) ಕೈವಾರದ ಸಹಾಯದಿಂದ, A ಕೇಂದ್ರವಾಗಿಟ್ಟುಕೊಂಡು ∠A ದ ಬಾಹುಗಳನ್ನು B ಮತ್ತು C ಗಳಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.




4) ಕೈವಾರದ ಇದೇ ತ್ರಿಜ್ಯವನ್ನು ಇಟ್ಟುಕೊಂಡು P ಕೇಂದ್ರವಾಗಿಟ್ಟುಕೊಂಡು $l$ ರೇಖೆಯನ್ನು Q ನಲ್ಲಿ ಕತ್ತರಿಸುವಂತೆ ಒಂದು ಕಂಸವನ್ನು ಎಳೆಯಿರಿ.




5) ಕೈವಾರವನ್ನು BC ಯ ಉದ್ದಕ್ಕೆ ಸ್ಥಿರಗೊಳಿಸಿ



6) ಈಗ ಕೈವಾರದ ಸೂಜಿ ತುದಿಯನ್ನು Q ಬಿಂದುವಿನಲ್ಲಿಟ್ಟು ಹಿಂದಿನ ಕಂಸವನ್ನು R ನಲ್ಲಿ ಕತ್ತರಿಸಿ.




7) ಈಗ PR ಸೇರಿಸಿ ಇದು ∠P ಯನ್ನು ಕೊಡುತ್ತದೆ. ∠P ಯು ∠A ನಷ್ಟೇ ಅಳತೆಯನ್ನು ಹೊಂದಿರುತ್ತದೆ.




9. 40° ಕೋನವನ್ನು ರಚಿಸಿ ಇದರ ಸಂಪೂರಕ (ಸರಳ ಕೋನಪೂರಕ) ಕೋನವನ್ನು ಪುನಃ ರಚಿಸಿ.

**ಹಂತಗಳು :**

1) ಯಾವುದಾದರೂ ಒಂದು ರೇಖೆ PQ ಎಳೆದು, ಅದರ ಮೇಲೆ O ಬಿಂದುವನ್ನು ಗುರುತಿಸಿ.

2) O ಬಿಂದುವಿನಲ್ಲಿ ಕೋನಮಾಪದ ಸಹಾಯದಿಂದ 40° ಕೋನವನ್ನು ರಚಿಸಿ.

3) O ಕೇಂದ್ರವಾಗಿಟ್ಟುಕೊಂಡು ಅಗತ್ಯವಾದ ತ್ರಿಜ್ಯದಿಂದ ∠POA ದೊಳಗೆ ಒಂದು ಕಂಸವನ್ನು ಎಳೆಯಿರಿ. ಕಂಸವು ಕೋನವನ್ನು ಕ್ರಮವಾಗಿ B ಮತ್ತು C ಗಳಲ್ಲಿ ಕತ್ತರಿಸಲಿ.

4) M ರೇಖೆಯನ್ನು ಎಳೆದು ಅದರ ಮೇಲೆ S ಬಿಂದುವನ್ನು ಗುರುತಿಸಿ. S ನ್ನು ಕೇಂದ್ರವಾಗಿಟ್ಟುಕೊಂಡು ಮೊದಲಿನ ತ್ರಿಜ್ಯದ ಅಳತೆಯಂತೆ ಒಂದು ಕಂಸವನ್ನು ಎಳೆಯಿರಿ. ಅದು M ರೇಖೆಯನ್ನು T ನಲ್ಲಿ ಛೇದಿಸಲಿ.

5) ಕೈವಾರವನ್ನು BC ಯ ಅಳತೆಯಷ್ಟು ಸ್ಥಿರಗೊಳಿಸಿ, T ಯನ್ನು ಕೇಂದ್ರವಾಗಿಟ್ಟುಕೊಂಡು ಒಂದು ಕಂಸವನ್ನು ಎಳೆಯಿರಿ. ಈ ಕಂಸವು ಮೊದಲಿನ ಕಂಸವನ್ನು R ನಲ್ಲಿ ಛೇದಿಸಲಿ.

6) RS ಸೇರಿಸಿ. ಈ ಕೋನವು 40° ಕೋನದ ಸರಳ ಕೋನಪೂರಕವಾಗಿರುತ್ತದೆ.

